ಕೊಡುಗೆ : ಕ. ಮಾ. ರಾಮಚಂದ್ರ

ಸಂಪುಟ : 8 ಜುಲೈ 20-1984 ಬೆಲೆ : 1-00 ಸಂಚಿಕೆ : 10-14

ಮಂಡ್ಯ ಜಿಲ್ಲೆ : ಕೊಲೆಗಳ ಸರಮಾಲೆ

ಮಳವಳ್ಳಿ ತಾಲ್ಲೂಕು ಕೊಲೆಗಳ ತಾಲ್ಲೂಕು, ಎಂದೇ ಹೆಸರಾಗಿದೆ. ಕಳೆದ ಹತ್ತು ತಿಂಗಳುಗಳಲ್ಲಿ ಇಲ್ಲಿ ಹನ್ನೆರಡು ಕೊಲೆಗಳು ನಡೆದಿವೆ. ಕೊಲೆಗೀಡಾದವರಲ್ಲಿ ಅನೇಕರು ದಲಿತರೂ, ಬಡವರೂ ಆಗಿದ್ದಾರೆ. ಇಲ್ಲಿ ಕೊಲೆಯೊಂದಕ್ಕೆ ಕಾರಣ ಬೇಕಾಗಿಲ್ಲ. ಮನುಷ್ಯರ ಜೀವಕ್ಕೆ ಇಲ್ಲಿ ಚಿಕ್ಕಾಸಿನ ಬೆಲೆಯೂ ಇಲ್ಲ. ಕುರಿ ಕೋಳಿಗಳಂತೆ ಬಡವರನ್ನು ಕತ್ತರಿಸಲಾಗುತ್ತಿದೆ. ಯಾವ ಕೊಲೆಗೂ ಸಾಕ್ಷಿ ಹೇಳಲು ಯಾರೂ ತಯಾರಿಲ್ಲ. ಯಾಕೆಂದರೆ ದೊಡ್ಡವರ ದೌರ್ಜನ್ಯದ ವಿರುದ್ಧ ಸಾಕ್ಷಿ ಹೇಳಲು ಪ್ರಯತ್ನಿಸಿದವರು ಕೂಡಾ ಕೊಲೆಯಾದ ಉದಾಹರಣೆಗಳಿವೆ.

ಈಗ್ಗೆ ಸುಮಾರು ಏಳುತಿಂಗಳ ಹಿಂದೆ ಇದೇ ತಾಲ್ಲೂಕು ಕಲ್ಲಾರೆಪುರದ ಮಂಚಮ್ಮನೆಂಬ ಹರಿಜನ ಯುವತಿ ಮಂಚಮ್ಮನ ಶವವು ಕಲ್ಕುಣಿ ಗ್ರಾಮದ ದೊಡ್ಡಕೆರೆಯಲ್ಲಿ ತೇಲಿತು. ಮುಖವು ಗುರುತು ಹಿಡಿಯದಂತೆ ಜಜ್ಜಿ ಹಾಕಲ್ಪಟ್ಟಿತ್ತು. ಮೇಲ್ಕಂಡ ಯುವತಿಯು ಜತೆ ಕಲ್ಕುಣಿ ಗ್ರಾಮದ ಗೂಂಡಾ ಸುಂದರ ಮತ್ತು ಡೂಪಿಮಗ ಎಂಬುವರು ಅಕ್ರಮ ಸಂಬಂಧ ಹೊಂದಿದ್ದರು. ಮಂಚಮ್ಮ ಬಸಿರಿಯಾದಳು. ಆದರಿಂದಾಗಿ ಅವಳಿಗೊಬ್ಬ ಗಂಡನ ಅನಿವಾರ್ಯ ಇತ್ತು. ಸುಂದರ ಅಥವಾ ಡೂಪಿ ತನ್ನನ್ನು ಮದುವೆಯಾಗುವಂತೆ ಆಕೆ ಒತ್ತಾಯಿಸಿದಳು. ಆದರ ಪರಿಣಾಮವಾಗಿ ಆಕೆ ಮೇಲ್ಕಂಡ ಸುಂದರ ಮತ್ತು ಡೂಪಿಗಳಿಂದ ಕೊಲೆಯಾದಳು.

ಕೊಲೆಯಾದ ಮಂಚಮ್ಮ ಕಿರುಗಾವಲು ಗ್ರಾಮದ ಸಂತೆಮಾಳದಲ್ಲಿರುವ ಕುಂಟಮ್ಮನ ಟೆಂಟಿನಲ್ಲಿ ತನ್ನ ಪ್ರೇಮಿಗಳನ್ನು ಸಂಧಿಸುತ್ತಿದ್ದಳು. ಇದು ಹಾಡುಹಗಲು ವ್ಯವಹಾರವಾಗಿತ್ತು. ಎಲ್ಲರಿಗೂ ಗೊತ್ತಿದ್ದ ಸಂಗತಿಯೂ ಆಗಿತ್ತು; ಸಂತೇಮಾಳದ ಕುಂಟಮ್ಮ ವಯಸ್ಸು ಕಳೆದ ವೇಶ್ಯೆ. ಹೊಟ್ಟೆಪಾಡಿಗಾಗಿ ತಲೆಹಿಡುಕುತನ ಮಾಡುತ್ತಿರುವಳು. ಈ ವಿಚಾರ ಸುತ್ತಮುತ್ತಲ ಹತ್ತಾರು ಹಳ್ಳಿಗಳಿಗೆ ಗೊತ್ತಿದೆ. ಈ ಕೊಲೆ ಪೋಲಿಸರ ಗಮನಕ್ಕೆ ಬಂದಿಲ್ಲ.

ಕಿರುಗಾವಲು ಗ್ರಾಮದ ಅಂದಾನಿ ಎಂಬ ದಲಿತ ಯುವಕ ಮೇಲ್ಕಂಡ ಮಂಚಮ್ಮನ ಕೊಲೆಯನ್ನು ಕಣ್ಣಾರೆ ಕಂಡ ತಪ್ಪಿಗಾಗಿ ಕೊಲೆಯಾಗಿದ್ದಾನೆ. ಈ ಗ್ರಾಮದಲ್ಲಿ ಸುಮಾರು ನೂರು ದಲಿತ ಕುಟುಂಬಗಳಿವೆ. ಮುಸ್ಲಿಮರು ನಾನೂರು ಐನೂರು ಬೆಸ್ತರು ಮತ್ತು ಒಕ್ಕಲಿಗರು ತಲಾ ನೂರೈವತ್ತು ಕುಳ ಇದೆ. ಹೀಗಿದ್ದು ಈ ಒಂದೆ ಯಾವುದೇ ಜಾತಿ ಜಗಳ ನಡೆದ ಉದಾಹರಣೆಯಿಲ್ಲ. ಈಗಲೂ ಕೋಮು ಸಾಮರಸ್ಯವು ಇದೆ.

ಅಂದಾನಿಯು ಕಿರುಗಾವಲು ಗಾಮದ ಸಂತೆ ಮಾಳದಲ್ಲಿ ಮೂಟೆ ಹೊರುವ ಕೆಲಸ ಮಾಡುತ್ತಿದ್ದನು. ಈತ ಅತಿ ಮೃದು ಸ್ವಭಾವದ ವ್ಯಕ್ತಿಯೆಂದು ಕಿರುಗಾವಲು ಗ್ರಾಮದ ಎಲ್ಲಾ ಜಾತಿಯ ಜನರು ಪ್ರಶಂಸೆ ಮಾಡಿದ್ದಾರೆ. ಯಾರೊಂದಿಗೂ ಎಂದೂ ಜಗಳವಾಡದ ಈತನು, ಮಂಚಮ್ಮನ ಕೊಲೆ ಕಣ್ಣಾರೆ ಕಂಡು ಕುಪಿತನಾದನು. ಸುಂದರ, ಡೂಪಿ ಇತ್ಯಾದಿಗಳನ್ನು ಪೋಲೀಸಿಗೆ ಹಿಡಿದು ಕೊಡುವುದಾಗಿ ಹೆದರಿಸಿದನು. ಆದರ ಪರಿಣಾಮ ಸಂತೆಮಾಳದ ಬೆಸ್ತಕೋಮಿನ ಕೂಲಿಕಾರರೂ ಸುಂದರಡೂಪಿಗಳ ಆಪ್ತಸ್ನೇಹಿತರೂ ಆದ ಆನಂದ ಕೆಂಚುಪಿಳ್ಳೆ ಮತ್ತು ಸೊತ್ತ ಎಂಬುವರಿಂದ 9-6-84ರ ರಾತ್ರಿ ಕೊಲೆಯಾದನು.

ಮೇಲ್ಕಂಡ ರಾತ್ರಿ ಸುಮಾರು ಎಂಟು ಗಂಟೆಯಲ್ಲಿ ಅಂದಾನಿ ಸಂತೆಮಾಳದಿಂದ ಮನೆಗೆ ವಾಪಸ್ಸಾಗುತ್ತಿದ್ದನು. ಆಗ ಯಾರೋ ಇಬ್ಬರು ಆತನನ್ನು ಬಲವಂತಪಡಿಸಿ ತಮ್ಮ ಜತೆಗೆ ಕರೆದುಕೊಂಡು ಹೋದುದನ್ನು ಕಿರುಗಾವಲು ಗ್ರಾಮದ

(ಮುಂದಿನ ಪುಟಕ್ಕೆ)

ತನಿಖೆ

ಕೊಲೆಗಳ ಲೆಕ್ಕಾಕೂಡ ಗೊತ್ತಿರದ ಮೂರ್ಖ ಸಬ್‌ಇನ್ಸ್‌ಪೆಕ್ಟರ್

ದಿನಾಂಕ 11-6-84ರಂದು ಬೆಳಿಗ್ಗೆ 11 ಗಂಟೆಯಲ್ಲಿ ನಾನು ಸಬ್‌ಇನ್ಸ್‌ಪೆಕ್ಟರ್ ಪುಟ್ಟಮಾದಪ್ಪ ಅವರನ್ನು ಸಂಧಿಸಿದ್ದೆ. ಅವರ ಜತೆ ಅವರ ಚೇಂಬರಿನಲ್ಲಿ ಕೂತು ಮಾತಾಡಿದ್ದು ಇಲ್ಲಿದೆ.

ಸ.ಇ. "ಏನ್ರೀ ನೀವೆನಾ ಮಳ್ಳೂರು ನಾಗರಾಜಾ ?"

ನಾನು : "ಹೌದು ಸಾರ್"

ಆತ: ನನ್ನ ಮೇಲೆ ಏನೇನೊ ಎಗ್ಸಾಜರೇಟ್ ಮಾಡಿ ಬರೆದಿದ್ದೀರಿ"

ನಾನು : ಏನೂ ಇಲ್ಲ ವಸ್ತುಸ್ಥಿತಿಯನ್ನೇ ಬರೆದಿದ್ದೇನೆ"

ಆತ : "ನೋಡಿ 10 ಕೊಲೆ ಅಂತ ನಿಮ್ಮ ಕರಪತ್ರದಲ್ಲಿದೆ. ಆದ್ರೆ ಆಗಿರೋವು ಐದೇ ಕೊಲೆ".

ನಾನು : ಹತ್ತು ಕೊಲೆ ಎಂಬುದು ಕೂಡಾ ತಪ್ಪು. ಹನ್ನೆರಡಾಗಿವೆ."

ಆತ : ಕೊಡಿ ಲೆಕ್ಕ ಕೊಡಿ ನಾನು ಎನ್‌ಕ್ವೈರಿ ಮಾಡ್ತೀನಿ."

ನಾನು : ನೀವೇ ಹುಡುಕಿ ಮಾಡಬೇಕಾದ ಕೆಲಸ ಅದು.

ಆತ : ನೀವು ಸುಮ್ಮನೆ ತರಲೆ ಮಾಡ್ತ ಇದ್ದೀರಿ. ನಮ್ಮನ್ನ ಒಂದು ಮಾತು ಮುಂಚಿತವಾಗಿ ಕೇಳಬಾರದಿತ್ತ ?"

ನಾನು : "ಇದು ನಿಮ್ಮ ಬೇಜವಾಬ್ದಾರಿ, ಕೊಲೆಯನ್ನ ಗಂಭೀರವಾಗಿ ಪರಿಗಣಿಸಬೇಕು.

ಆತ : "ಆಯ್ತಪ್ಪ ಇನ್ನು ಮುಂದೆ ನಾನು, ನೀವು ಹೇಳಿದ ಹಾಗೆ ಕೇಳುತ್ತೇನೆ. ಯಾವ ತೊಂದರೇನೂ ಮಾಡಬೇಡಿ."

ನಾನು : ಯಾರಿಗೂ ತೊಂದರೆ ಮಾಡೋದು ನಮ್ಮ ಉದ್ದೇಶವಲ್ಲ. ನಿಮ್ಮ ಕೆಲಸ ನೀವು ಮಾಡಿದರೆ ಯಾರೂ ತೊಂದರೆ ಕೊಡಕಾಗಲ್ಲ"

29-6-84ರಂದು ನಡೆಯಬಹುದಾಗಿದ್ದ ದ.ಸಂ.ಸ. ಪ್ರತಿಭಟನಾ ಮೆರವಣಿಗೆ, ಧರಣಿಗೆ ಹೆದರಿ ಮೆತ್ತಗಾಗಿರುವ ಎಸ್.ಐ. ಪುಟ್ಟಮಾದಪ್ಪನವರು ಕಾರ್ಯಕ್ಷಮತೆಯನ್ನು ರೂಢಿಸಿಕೊಂಡರೆ ಉತ್ತಮ ರೀತಿಯಲ್ಲಿ ಕೆಲಸಮಾಡಬಲ್ಲರು.

ಅವರ ಸುತ್ತಾ ಇರುವ ಮಳವಳ್ಳಿಯ ದಲಿತ ವಿದ್ಯಾರ್ಥಿ ಕೂಟದ ಎಂಜಲುನಾಯಿಗಳು ಅವರನ್ನು ದಾರಿತಪ್ಪಿಸಿವೆ ಅಷ್ಟೆ.

ದಾಸಿ ಎಂಬಾತನು ಕಂಡಿರುತ್ತಾನೆ. ನಂತರ ಸಂತೆ ಮಾಳದಲ್ಲಿರುವ ನಾಗಣ್ಣನ ಸೈಕಲ್ ಷಾಪಿನಲ್ಲಿ ಮೂರು ಸೈಕಲ್‌ಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಆ ರಾತ್ರಿಯೇ ಷಾಪಿಗೆ ವಾಪಸ್ಸಾಗಿದ್ದು ಒಂದು ಸೈಕಲ್ ನಾಪತ್ತೆಯಾಗಿದೆ. ನಾಪತ್ತೆಯಾಗಿದ್ದ 4ನೇ ನಂಬರ್ ಸೈಕಲ್ ಅಂದಾನಿಯ ಹೆಣ ಬಿದ್ದಿದ್ದ ಜಾಗದಿಂದ ಸುಮಾರು ಒಂದು ಮುಕ್ಕಾಲು ಫರ್ಲಾಂಗ್ ದೂರದಲ್ಲಿ ಸಿದ್ಧಿಕಟ್ಟೆಯಲ್ಲಿ ಬಿದ್ದಿತ್ತು. ಅಂದಾನಿಯ ಕೊರಳನ್ನು ಹಿಸುಕಿರುವ ಬೆರಳ ಗುರುತುಗಳು ಕೊರಳ ಮೇಲೆ ಹಾಗೆ ಇದ್ದುವೆಂದು ಗ್ರಾಮಸ್ಥರು ಹೇಳುತ್ತಿದ್ದಾರೆ. ಬಲಗೆನ್ನೆಯ ಮೇಲೆ ಬಲವಾದ ಏಟು ಬಿದ್ದಿತ್ತೆಂದು ಹೇಳಲಾಗುತ್ತಿದೆ. ಅಲ್ಲದೆ ಮೂಗು ಬಾಯಿಯನ್ನು ಮುಚ್ಚಿ ಉಸಿರಾಡದಂತೆ ಮಾಡಿ ಸಾಯಿಸಿರುತ್ತಾರೆಂದು ಸುದ್ದಿಯಾಗಿದೆ.

ಅಂದಾನಿ ಕೊಲೆಯನ್ನು ಸಂತೆಮಾಳದ ಕುಂಟಮ್ಮ ಕಂಡಿದ್ದಾಳೆ. ಆದರೆ ಆಕೆ ಜೀವ ಭಯದಿಂದ ಬಾಯಿಬಿಡುತ್ತಿಲ್ಲ.

ಅಂದಾನಿ ಕೊಲೆಯ ನಂತರ ಈ ಕೊಲೆಯ ಸಂಬಂಧದಲ್ಲಿ ಪೋಲೀಸರ ವರ್ತನೆ ಅಮಾನವೀಯ ವಾಗಿದೆ. ಎಸ್. ಐ. ಪುಟ್ಟಮಾದಪ್ಪನವರು ಅಂದಾನಿಯ ಹೆಣವನ್ನು ಸತ್ತ ನಾಯಿಯ ಹೆಣದಂತೆ ಎಳೆಸಿಹಾಕಿದ್ದಾರೆಂದು ದಲಿತ ಸಂಘರ್ಷ ಸಮಿತಿ ಹೊರಡಿಸಿರುವ ಕರಪತ್ರದಲ್ಲಿ ಆರೋಪಿಸಲಾಗಿದೆ. ಯಾವುದೇ ಕೊಲೆಯ ಬಗ್ಗೆ ಸೀರಿಯಸ್ಸಾದ ತನಿಖೆ ನಡೆದಂತಿಲ್ಲ. ಇದಕ್ಕೆ ಕಾರಣ ಎಸ್.ಐ. ಪುಟ್ಟಮಾದಪ್ಪರಿಗಿಂತಲೂ, ಸರ್ಕಲ್ ಇನ್ಸ್‌ಪೆಕ್ಟರ್ ಮಹಬೂಬ್‌ಜಾನ್ ಎಂದು ಹೇಳಬಹುದು.

ಹಣಕ್ಕಾಗಿ, ಜಾತಿಗಾಗಿ, ಮತ್ತಿತರ ಕ್ಷುದ್ರ ಕಾರಣಗಳಿಗಾಗಿ ಮಳವಳ್ಳಿಯಲ್ಲಿ ನಡೆದ 12ಕೊಲೆಗಳು ಇಡೀ ಮಂಡ್ಯದ ಎದೆ ನಡುಗಿಸಿವೆ.

ಈ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿ ದಿನಾಂಕ 29-6-84ರಂದು ಮಳವಳ್ಳಿಯಲ್ಲಿ ಒಂದು ದಿವಸ ಸಾಂಕೇತಿಕ ದರಣಿ ಮತ್ತು ಮೆರವಣಿಗೆ ಇಟ್ಟುಕೊಂಡಿತ್ತು. ಪೋಲೀಸರು ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ವಿನಂತಿಸಿದ್ದರಿಂದ ಹೋರಾಟವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಯಿತು. ನಾನು ವಿವರವಾಗಿ ಪರಿಶೀಲಿಸಿದ ಮತ್ತೊಂದು ಕೊಲೆ: ಇದೇ ತಾಲ್ಲೂಕು ಬಾಣಸಮುದ್ರದ ಹರಿಜನ ಮರಿಸಿದ್ದಯ್ಯನದು. ಮರಿಸಿದ್ದಯ್ಯ ಇಲ್ಲಿನ ಸೊಸೈಟಿಯಲ್ಲಿ ಅಟೆಂಡರ್. ವಯಸ್ಸು ಸುಮಾರು ಮೂವತ್ತಿರಬಹುದು.

ಈತ ಕೊಲೆಯಾದ ದಿನಾಂಕ 30-6-84, ಬಾಣಸಮುದ್ರದಿಂದ ಕೊಂಚ ದೂರದ ಪುರದ ದೊಡ್ಡಿಗೇಟಿನಲ್ಲಿ ಮರಿಸಿದ್ದಯ್ಯನನ್ನು ಅಮಾನುಷವಾಗಿ ಚಚ್ಚಲಾಯಿತು. ಸಂಜೆ ಐದು ಗಂಟೆಯಲ್ಲಿ ತನ್ನ ಅಪ್ಪ ಕಂತಯ್ಯನಿಂದ ಐದುರೂಪಾಯಿ ಪಡೆದು ಸೇಂದಿ ಕುಡಿಯಲು ಪುರದ ದೊಡ್ಡಿಗೇಟಿಗೆ ಹೋದ ಮರಿಸಿದ್ದಯ್ಯ ಒಕ್ಕಲಿಗರಾದ ಕೆಂಪಯ್ಯ, ರಾಮಸ್ವಾಮಿ ಪುಟ್ಟ ಮತ್ತು ಕುಳ್ಳ ಎಂಬುವರಿಂದ ಮರಣಾಂತಿಕ ಹೊಡೆತ ತಿಂದ.

ಮೇಲ್ಕಂಡ ಗ್ರಾಮದಲ್ಲಿ ಕಳೆದ ಒಂದು ವರ್ಷದಿಂದ ಹರಿಜನರಿಗೆ ಬಹಿಷ್ಕಾರವಿದೆ. ಮರಿಸಿದ್ದಯ್ಯನ ಅಣ್ಣ ಮಾದಯ್ಯ ಕಳೆದವರ್ಷ ಜುಲೈ ತಿಂಗಳಲ್ಲಿ ಹರಿಜನರಿಗಾಗಿಯೆ ಒಂದು ಅಂಗಡಿಯನ್ನು ವಿಜಯ ಬ್ಯಾಂಕಿನಿಂದ ಸಾಲ ಪಡೆದು ಇಟ್ಟಿದ್ದರು. ಈ ಬಹಿಷ್ಕಾರದ ಹಿನ್ನೆಲೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ತನಗೆ ಗೊತ್ತಿದ್ದೂ ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ದಿನಾಂಕ 18-4-84ರಂದು ಕುತಯ್ಯನ ಮನೆಗೆ ಮೇಲ್ಜಾತಿಯ ಪುಂಡರು ಬೆಂಕಿ ಹಚ್ಚಿದರು. 19-4-84 ರಂದು ರೂರಲ್ ಪೋಲೀಸ್ ಠಾಣೆ, ಮಳವಳ್ಳಿಗೆ ದೂರು ನೀಡಿದರೂ ಯಾವ ಪ್ರಯೋಜನವೂ ಆಗಲಿಲ್ಲ. ಈ ಸ್ಥಿತಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಮೆಹಬೂಬ್‌ಜಾನ್ ಅವರೇ ಕಾರಣ ಎಂದು ಹೇಳದೆ ಬೇರೆ ಮಾರ್ಗವಿಲ್ಲ.

ಮರಣಾಂತಿಕ ಸ್ಥಿತಿಯಲ್ಲಿದ್ದ ಮರಿಸಿದ್ದಯ್ಯನನ್ನು ಮನೆಗೆ ತಂದಾಗ ಆತ ತನ್ನ ತಂದೆಯ ಹತ್ತಿರ ತನ್ನ ಮೇಲೆ ಹಲ್ಲೆ ನಡೆಸಿದವರ ಹೆಸರನ್ನು ಹೇಳಿರುತ್ತಾನೆ. ಆತನ ಹೇಳಿಕೆ ಪ್ರಕಾರ ಅವನನ್ನು ಪುರದ ದೊಡ್ಡಿಯ ಕೆಂಪಯ್ಯ, ರಾಮಸ್ವಾಮಿ, ಪುಟ್ಟ ಮತ್ತು ಕುಳ್ಳ ಎಂಬುವರು ಮರ್ಮಾಂಗಕ್ಕೆ ಗುದ್ದಿ ತರಡುಬೀಜ ಹಿಸುಕಿ ಕೊಲೆಮಾಡಲೆತ್ನಿಸಿದ್ದಾರೆ. ಮರಿಸಿದ್ದಯ್ಯನ ಕೊಲೆಮಾಡಲು ಕೊಲೆಗಾರರಿಗೆ ಸಹಾಯಕರಾಗಿ ನಿಂತವರು ಉಜ್ಜನಿ ಬಸವೇಗೌಡನ ಮಗ ರಾಮೇಗೌಡ ಮತ್ತು ಸುಬ್ಬೇಗೌಡನ ಮಗ ರಾಮೇಗೌಡ.

ಈ ಕೊಲೆಗೆ ಖಚಿತ ಕಾರಣ ಇನ್ನೂ ತಿಳಿದು ಬಂದಿಲ್ಲ. ಬಹಿಷ್ಕಾರ ಇದ್ದರೂ ಸಹಾ ತಮ್ಮೇಗೌಡನ ಮಗ ಜೆ. ರಾಮು ಮತ್ತು ಚಿಕ್ಕತಿಮ್ಮೇಗೌಡನ ಮಗ ನಾಗರಾಜಮೂರ್ತಿ ಎಂಬುವರು ತಾವಾಗಿ ಮರಿಸಿದ್ದಯ್ಯನ ಬಗ್ಗೆ ಸದರಿ ಕೊಲೆಯನ್ನು ಬಸ್‌ಆಕ್ಸಿಡೆಂಟೆಂದು ಸುಳ್ಳು ಹೇಳಿ,ಅರ್ಜಿ ಬರೆದುಕೊಟ್ಟಿರುತ್ತಾರೆ. (ಅದನ್ನು ಕಂತಯ್ಯ ಒಪ್ಪದಿದ್ದಾಗ ಉಳಿದವರನ್ನೂ ಕೊಲ್ಲುವುದಾಗಿ ಹೇಳಿ ಪರಾರಿಯಾಗಿರುತ್ತಾರೆ.) ಈ ಕೊಲೆ ಇನ್ನೂ ಪೋಲೀಸರಿಗೆ ದೂರಿನ ರೂಪದಲ್ಲಿ ಬಂದಿರುವುದಿಲ್ಲ. ಅವರೇನು ಮಾಡುವರೆಂಬುದನ್ನು ಕಾದು ನೋಡಬೇಕು.

–ಮುಳ್ಳೂರು ನಾಗರಾಜ್

ಆರ್.ಎಸ್.ಎಸ್. ಬಲೆಯಿಂದ ದ.ಸಂ.ಸ. ಕಡೆಗೆ

ಮಲೆನಾಡಿನ ತಪ್ಪಲಿನಲ್ಲಿ ಬೇರೆ ಆಸರೆಯಿಲ್ಲದಂತೆ ಕರಗಿ, ಸೊರಗಿ, ನಿರ್ಲಿಪ್ತ-ನೀರವತೆಯೆಂಬತೆ ಭೇಡಿಯಿಲ್ಲದ ಬಂಧನದಿಂದ ಹುದುಗಿ–ಅವಿತು ಕೊಂಡಿರುವ ಕರ್ನಾಟಕದ ಒಂದು ಭೂಭಾಗ ದಕ್ಷಿಣ ಕನ್ನಡಜಿಲ್ಲೆ, ಜಾತಿ, ವರ್ಗ, ವರ್ಣ ರಾಜಕೀಯ ಇತ್ಯಾದಿಗಳಿಂದ ಈ ಜಿಲ್ಲೆಯ ಒಟ್ಟು ಜನಾಂಗ ಚರ್ವಿತ ಚರ್ವಣವಾಗಿದೆ. ದಲಿತ ಸಂಘರ್ಷ ಸಮಿತಿ ಈ ಜಿಲ್ಲೆಯಲ್ಲಿ ಆರಂಭಗೊಂಡು ಕಳೆದ ಆರುವರ್ಷಗಳ ಚರಿತ್ರೆಯಲ್ಲಿ ಸಂಘಟನೆಯ ಮುಂಚೂಣಿಯಲ್ಲಿರುವಾಗ ಅನುಭವಿಸಿದ ಅನುಭವಗಳು ಹತ್ತು ಹಲವಾರು. ಕಾರಣ ಇಷ್ಟೆ.......
"ಪ್ರಪಂಚದ ಯಾವುದೇ ಮೂಲೆಯಲ್ಲಿ ಯಾವುದೇ ಸಂಸ್ಕೃತಿಯಿರಲಿ, ಆಚಾರ–ವಿಚಾರಗಳಿರಲಿ, ಅದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೆ. ಇಲ್ಲಿಯ ಕತ್ತಲ ಬದುಕಿನ ಜನರ ನೈಜ ಚಿತ್ರವನ್ನು ವರ್ಣಿಸುವುದು ಶಬ್ದಕ್ಕಿಂತ ಎಷ್ಟಾದರೂ ಹೊರತು. ಇಂತಹ ಒಂದು ಕ್ಷುದ್ರ ವಾತಾವರಣದಲ್ಲಿಯೇ ಹುಟ್ಟಿ ಬೆಳೆದ ದಲಿತ ಸಂಘಟನೆಯ ಗೆಳೆಯರ ಒಂದು ವಿಶಿಷ್ಟ ಅನುಭವ ಈ ವರದಿ.

ದಕ್ಷಿಣ ಕನ್ನಡ ಜಿಲ್ಲೆಯ ಉದರ ಗರ್ಭದಲ್ಲಿ ಅವಿತುಕೊಂಡಂತಿರುವ ಒಂದು ತಾಲ್ಲೋಕು ಬೆಳ್ತಂಗಡಿ (ಇತ್ತೀಚೆಗೆ ಮಂಗನ ಕಾಯಿಲೆಯಿಂದಲೂ ಸಾಕಷ್ಟು ಹೆಸರುವಾಸಿ) ಈ ತಾಲ್ಲೋಕಿನಲ್ಲಿ ದಲಿತ ಸಂಘರ್ಷ ಸಮಿತಿ ಆರಂಭಗೊಂಡು ನಾಲ್ಕು ವರ್ಷಗಳು ಸರಿದವು. ಜಾತಿವಾದಿ ಸಂಘಟನೆಯಾದ ವಿಶ್ವಹಿಂದೂ ಪರಿಷತ್‌ನ ಕಾರ್ಯಾಚರಣೆಯಿಂದಾಗಿ ಹಲವಾರು ದಲಿತರು ದಲಿತ ಸಂಘರ್ಷ ಸಮಿತಿಯ ಕಾರ್ಯಕ್ರಮಗಳಿಗೆ ಬರುವುದು ತೀರಾ ಕಡಿಮೆ, ಇದಕ್ಕೆ ಕಾರಣವನ್ನು ಕಂಡುಕೊಂಡ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಅಂತಹ ದಲಿತರನ್ನು ಪ್ರತ್ಯಕ್ಷ ಕಂಡು ವಿಚಾರ ವಿನಿಮಯ ಮಾಡಿದಾಗ ಆರಂಭದಲ್ಲಿ ಇಂದು–ನಾಳೆಯೆಂದು ದಿನ ಎಣಿಸಬೇಕಾಗಿ ಬಂತು. ಸಂದಿಗ್ಧತೆಯಲ್ಲಿ ಒಂದು ವರ್ಷವನ್ನು ಕಳೆದ ದಲಿತರು ಆರ್. ಎಸ್. ಎಸ್.ನ ಕುಂದು ಕೊರತೆಗಳನ್ನು ಮನಗಂಡು–ಅಲ್ಲಿಯ (D S S)ನ ಪದಾಧಿಕಾರಿಗಳನ್ನು ಕಂಡು

(ಕೊನೇ ಪುಟಕ್ಕೆ)

ಅಂತರ್ಜಾತೀಯ ವಿವಾಹ–ಒಂದು ಚಿಂತನೆ

ಗಂಡು ಹೆಣ್ಣುಗಳು ಪರಸ್ಪರ ಅನ್ಯ ಜಾತಿಯವರಾಗಿದ್ದು, ಇಬ್ಬರೂ ಒಪ್ಪಿ ವಿವಾಹವಾಗುವ ರೀತಿಯನ್ನು ಅಂತರ್ಜಾತೀಯ ವಿವಾಹ ಎನ್ನಬಹುದು. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅಂತರ್ಮತೀಯ ವಿವಾಹಗಳೂ ಸಂಭವನೀಯ. ಇಲ್ಲಿ ವಧೂ-ವರರು ಎರಡು ಭಿನ್ನ ಧರ್ಮಕ್ಕೆ ಸೇರಿದವರಾಗಿರುತ್ತಾರೆ. ಜಾತಿ ಮತ್ತು ಮತದ ಗಡಿಗಳನ್ನು ಮೀರಿ ನಡೆಯುವ ಮದುವೆಗಳು ಸಾಂಪ್ರದಾಯಿಕ ಸಮಾಜದ ವಿರೋಧವನ್ನು ಎದುರಿಸಬೇಕಾಗುತ್ತದೆ. ಮೂರನೆಯ ವಿಧಾನವೇನೆಂದರೆ ಅಂತರ್ಭಾಷೀಯ ವಿವಾಹ. ಈ ಮದುವೆಗೆ ಗಂಡು ಹೆಣ್ಣು ಒಂದೇ ಜಾತಿಯವರಾಗಿದ್ದು ಬೇರೆ ಭಾಷೆಗಳನ್ನು ಮಾತನಾಡುತ್ತಿದ್ದರೆ ಬಂಧುಗಳು, ತಂದೆ ತಾಯಿಗಳಿಂದ ಹೆಚ್ಚು ವಿರೋಧ ಕಂಡು ಬರುವುದಿಲ್ಲ.

ಅಂತರ್ಜಾತಿ ವಿವಾಹಗಳು ನಮ್ಮ ಜೀವನಕ್ಕಿಂತ ಹೆಚ್ಚಾಗಿ ಪುರಾಣಗಳಲ್ಲಿ ಸಂಭವಿಸಿವೆ. ಶಿವನ ಗಂಗೆ ಬೆಸ್ತರ ಹೆಣ್ಣು, ಕೃಷ್ಣನ ಹೆಂಡತಿಯರೆಲ್ಲಾ ಅನ್ಯಜಾತಿಯವರು. ವಶಿಷ್ಠನ ಮನದನ್ನೆ ಅರುಂಧತಿ ದಲಿತ ಮಹಿಳೆ. ಚೆಲುವ ನಾರಾಯಣ ಸ್ವಾಮಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮುಸ್ಲಿಂ ಕನ್ಯೆಯ ಕೈಹಿಡಿದ. ಈ ದೇವರುಗಳನ್ನು ಪೂಜಿಸುವ ಜನ ಅಂತರಜಾತಿ ವಿವಾಹದಲ್ಲಿ ಮಾತ್ರ ತಮ್ಮ ದೇವರುಗಳಿಗೆ ತಿರುಗಿ ಬಿದ್ದಿರುವುದು ಆಶ್ಚರ್ಯಕರ.

ಹನ್ನೆರಡನೆಯ ಶತಮಾನದಲ್ಲಿ ನಡೆದ ಅಂತರ್ಜಾತೀಯ ವಿವಾಹವೊಂದು ಕಲ್ಯಾಣದ ಕ್ರಾಂತಿಗೂ, ಅಪಾರ ರಕ್ತಪಾತಕ್ಕೂ ಎಡೆ ಮಾಡಿತು. ವಧೂ–ವರರು ಬ್ರಾಹ್ಮಣ ಮತ್ತು ಹೊಲೆಯ ಜಾತಿಗೆ ಸೇರಿದವರಾಗಿದ್ದರು. ಇವರ ವಿವಾಹಕ್ಕೆ ಎರಡೂ ಕಡೆಯ ತಂದೆ ತಾಯಿಗಳು ಅಡ್ಡಿ ಮಾಡಲಿಲ್ಲ. ಸಾಮಾಜಿಕ ಸಮಾನತೆಯ ತತ್ವದಲ್ಲಿ ಅಂದು ನಂಬಿಕೆ ಇಟ್ಟಿದ್ದ ವೀರಶೈವ ಧರ್ಮವನ್ನು ಅವರು ಅವಲಂಬಿಸಿದ್ದೇ ವಿವಾಹ ಸಂಗಮವಾಗಲು ಕಾರಣವಾಯಿತು. ವೀರಶೈವ ಚಳುವಳಿಯ ಮಂಚೂಣಿಯಲ್ಲಿದ್ದ ಬಸವಣ್ಣನವರು ಈ ವಿವಾಹಕ್ಕೆ ಪ್ರೋತ್ಸಾಹ ಕೊಟ್ಟರು. ಹನ್ನೆರಡನೆಯ ಶತಮಾನದ ವೀರಶೈವರು ತಮ್ಮ ತತ್ವಗಳ ಬಗ್ಗೆ ಇಟ್ಟಿದ್ದ ಕಾಳಜಿಗೆ ಇದಕ್ಕಿಂತ ಪುರಾವೆ ಇನ್ನೊಂದಿಲ್ಲ. ಗಂಡು ಹೆಣ್ಣುಗಳಿಬ್ಬರೂ ಹೊಲೆಯ, ಬ್ರಾಹ್ಮಣ ಜಾತಿಗಳಿಗೆ ಸೇರಿದ್ದರೂ ಅವರು ಶಿವಭಕ್ತರಾಗಿದ್ದರಿಂದ ಈ ಸಾಮಾಜಿಕ ಸುಧಾರಣೆ ಸಾಧ್ಯವಾಯಿತು.

ಆದರೆ ಅಂತರ್ಜಾತೀಯ ವಿವಾಹಗಳು ಬಸವಣ್ಣನವರ ನಂತರ ಮುಂದುವರೆಯಲಿಲ್ಲ. ಇಂತಹ ವಿವಾಹಗಳಿಗೆ ಇಂದು ಎಲ್ಲಿಲ್ಲದ ಪ್ರಬಲ ವಿರೋಧವೇಕೆ ? ಇದಕ್ಕೆ ನಾವು ಅನುಸರಿಸುತ್ತಿರುವ ಜಾತಿ ಪದ್ಧತಿಯೇ ಕಾರಣ. ಜಾತಿ ವ್ಯವಸ್ಥೆ ಮೇಲು ಕೀಳುಗಳಿಂದ ತುಂಬಿದೆ. ಈಜಿಪ್ಟಿನ ಪಿರಮಿಡ್ಡುಗಳ ರಚನೆಯಂತೆ ನಮ್ಮ ಬಾಳು ಕೆಳಗಿರುವ ಬಹುಸಂಖ್ಯಾತಜನ ಕೀಳೆನಿಸಿಕೊಂಡರೆ ಮೇಲಿರುವ ಅಲ್ಪಸಂಖ್ಯಾತರು ಮೇಲೆನಿಸಿದ್ದಾರೆ. ಒಂದೊಂದು ಜಾತಿಗೂ ಅನೇಕ ನಿಷೇಧಗಳಿರುತ್ತವೆ. ಉದಾಹರಣೆಗೆ ಶೂದ್ರರು ಕುಂಬಳಕಾಯಿ ತಿನ್ನಬಾರದು. ಬ್ರಾಹ್ಮಣರು ಮಾಂಸ ತಿನ್ನಬಾರದು. ಕುಂಬಳಕಾಯಿ ತಿಂದ ಶೂದ್ರರು ಯಾರೂ ದೇವರ ಕೋಪಕ್ಕೆ ತುತ್ತಾಗಿ ಸತ್ತ ಘಟನೆ ಇದುವರೆವಿಗೂ ಕೇಳಿಬಂದಿಲ್ಲ. ಹಾಗೆಯೇ ಇಂದು ಕೆಲವು ಬ್ರಾಹ್ಮಣರು ಮಾಂಸವನ್ನು ಸೇವಿಸುತ್ತಾರೆ. ಈ ಕಾರಣಕ್ಕೆ ಅವರ ತಲೆ ಸಿಡಿದ ಘಟನೆ ಇದುವರೆವಿಗೂ ವರದಿಯಾಗಿಲ್ಲ. ಅಂತರಜಾತೀಯ ವಿವಾಹವೂ ಹಾಗೆಯೇ. ಇದು ಒಂದು ನಿಷೇಧ. ಇದನ್ನು ಮುರಿದ ತರುಣ ತರುಣಿಯರು ಈ ಕಾರಣದಿಂದ ಯಾವುದೇ ದೇವರ ಕೋಪಕ್ಕೆ ಈಡಾಗಿಲ್ಲ, ಚೆನ್ನಾಗಿಯೇ ಜೀವನ ಮಾಡುತ್ತಿದ್ದಾರೆ. ಅವರಿಗೂ ಮುದ್ದಾದ ಮಕ್ಕಳಾಗಿವೆ.

ಇಂದಿನ ಯುವಕ ಯುವತಿಯರಿಗೆ ಅಂತರಜಾತಿ ವಿವಾಹವಾಗುವ ಉತ್ಸಾಹವಿದೆ, ಆದರೆ ಪ್ರೋತ್ಸಾಹವಿಲ್ಲ. ಒಂದು ಜಾತಿಯ ಹುಡುಗ ಇನ್ನೊಂದು ಜಾತಿಯ ಹುಡುಗಿಯನ್ನು ಪ್ರೀತಿಸುತ್ತಾನೆ. ಅದಕ್ಕೆ ಕೆಲವರು ಅಡ್ಡಿ ಮಾಡುತ್ತಾರೆ. ಹುಡುಗ ಒತ್ತಾಯಕ್ಕೆ ಮಣಿದು ತಂದೆತಾಯಿ ತೋರಿಸುವ ಹುಡುಗಿಯ ಕೈಹಿಡಿಯುತ್ತಾನೆ. ತಂದೆ ತಾಯಿಗಳಿಗೆ ಬೇಕಾಗಿರುವುದು ಹುಡುಗನ ಸುಖ ಜೀವನವಲ್ಲ. ಅವರು ಬಯಸುವುದು ವರದಕ್ಷಿಣೆ ಗಂಟು ಜಾತಿಯ ಪ್ರತಿಷ್ಠೆ. ಹುಡುಗನನ್ನು ಹೆದರಿಸಿ ಇವೆರಡನ್ನೂ ಅವರು ಹೇಗೋ ಉಳಿಸಿಕೊಳ್ಳುತ್ತಾರೆ. ಆದರೆ ಮಗನ ಜೀವನ ನರಕವಾಗುತ್ತದೆ. ಕುಡಿತ, ಇಸ್ಪೀಟ್ ಇತ್ಯಾದಿಗಳು ಅವನನ್ನು ಆಳುತ್ತವೆ. ಇವನು ಎಷ್ಟೇ ದೊಡ್ಡ ಮನುಷ್ಯನಾಗಿರಲಿ ತನ್ನ ಪ್ರೇಯಸಿಯ ಮನೆಯ ಮುಂದಿನ ಬೀದಿಗಳಲ್ಲಿ ಹಲ್ಲುಗಿಂಜುತ್ತಾ, ಕಣ್ಣೀರು ಹಾಕುತ್ತಾ ಆಗಾಗ ಅಡ್ಡಾಡಿದರೂ ಆಶ್ಚರ್ಯವಿಲ್ಲ.

ಇದಕ್ಕಿಂತ ನೋವಿನ ಪ್ರಸಂಗಗಳು ಜರಗುವುದೂ ಉಂಟು. ಮನೆಯವರು ಒಪ್ಪದಿದ್ದರೆ ಪ್ರಣಯಿಗಳು ಆತ್ಮಹತ್ಯೆ ಮಾಡಿಕೊಳ್ಳಬಹುದು. ತಮ್ಮ ಮದುವೆಗೆ ವಿರೋಧಿಸಿದವರನ್ನು ಹುಡುಗ ಆವೇಶದಲ್ಲಿ ಚಾಕುವಿನಿಂದ ತಿವಿದು ತೊಂದರೆಗೀಡು ಮಾಡಬಹುದು. ಹರಿಜನ ಯುವಕನನ್ನು ಮದುವೆ ಆಗುವೆನೆಂದು ಪಟ್ಟು ಹಿಡಿದಾಗ ಕೋಪಗೊಂಡ ತಂದೆ ಅವಳನ್ನು ಗುಂಡಿಕ್ಕಿಕೊಂದು ಜೈಲು ಸೇರಿದ. ಇದರಿಂದ ಸಾಧಿಸಿದ್ದೇನು? ಆದ್ದರಿಂದ 18 ವರ್ಷ ದಾಟಿದ ಎಲ್ಲಾ ಯುವತಿಯರಿಗೂ ತಾವು ಇಷ್ಟಪಟ್ಟವರನ್ನು ಬಾಳ ಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ತಂದೆ ತಾಯಿಗಳು ಕೊಡಬೇಕು. ಈಗಾಗಲೇ ಕಾನೂನು ಈ ಸ್ವಾತಂತ್ರ್ಯ ಕೊಟ್ಟಿದೆ.

(ಸೌಜನ್ಯ ಸ್ಟ್ಯಾಂಗ್ ಇಂಡಿಯಾ)

ಸಿದ್ಧಲಿಂಗಯ್ಯ

ಚಿತ್ರಕಲೆಗಾರ ರಾಜು

3ನೇ ಪುಟದಿಂದ

ತಿರುಗಿ ನೋಡುತ್ತಿಲ್ಲ" ಎಂದು ರಾಜು ನೊಂದು ನುಡಿಯುತ್ತಾರೆ.

ರಾಷ್ಟ್ರೀಯ ಮಟ್ಟದ ಖ್ಯಾತ ಕಲೆಗಾರರಾದ ದಲಿತ ರಾಜುವನ್ನು ಸಂದರ್ಶಿಸಲು ನಾವು ಹೋದಾಗ ಅವರು ತುಂಬಾ ಆಶ್ಚರ್ಯಪಟ್ಟರು. ನನ್ನ ಕಲೆ ತುಳಿಯಲು ಪ್ರಯತ್ನಪಟ್ಟು ನನ್ನ ವಿಚಾರವನ್ನೇ ಪ್ರಕಟಣೆಗೆ ಬರದ ರೀತಿಯಲ್ಲಿ ತಡೆಹಿಡಿಯುತ್ತಿರುವ ಈ ಸಂದರ್ಭದಲ್ಲಿ 'ಪಂಚಮ'ವು ತಾನಾಗಿಯೇ ಹತ್ತಿರ ಹೋದದ್ದು ಒಂದು ರೀತಿಯಲ್ಲಿ ಅವರಿಗೆ ಆಶ್ಚರ್ಯವಾಯ್ತು, ಸಂತೋಷ ಉಂಟು ಮಾಡಿತ್ತು. ವಿಶ್ವವಿದ್ಯಾನಿಲಯದ ಬಡ ದಫೇದಾರನ ಮಗನಾಗಿ ಹುಟ್ಟಿದ ರಾಜು ಅತ್ಯಂತ ಬಡತನದಲ್ಲಿ, ತನ್ನ ಮೂರು ಮಕ್ಕಳ ತಂದೆಯಾಗಿ ದಾರುಣ ಸ್ಥಿತಿಯನ್ನು ಎದುರಿಸುತ್ತಿರುವ ಈತ ಇಂಡಿಯಾ ದೇಶದ ವ್ಯವಸ್ಥೆಯ ಬಗ್ಗೆಯೇ ರೋಸಿ ಹೋಗಿದ್ದಾರೆ." ನನ್ನ ಜಾತಿ, ನನ್ನ ಬಡತನ' ನನ್ನ ಕಲೆಯನ್ನು ಅಸ್ಪೃಶ್ಯವನ್ನಾಗಿಸಿ, ಮೇಲ್ಜಾತಿಯವರ ಕುಹಕದ ಮಾತುಗಳಿಗೆ ಎಡೆಮಾಡಿ ಕೊಟ್ಟಿದೆ, ಆದರೂ ಕಲೆಯಿಂದ ಸಮಾಜ ಬದಲಾಗೇ ಆಗುತ್ತದೆ," ಎಂದು ದಟ್ಟವಾಗಿ ನುಡಿಯುತ್ತಾರೆ.

ಕಲಾಪ್ರತಿಭೆಯ ಹುಚ್ಚು ಹಿಡಿದ ಬೆರಳಚ್ಚುಗಾರ ರಾಜು

*ಎಚ್. ಎಸ್. ರಾಜೇಂದ್ರಸಿಂಗ್
*ಆರ್. ಹರೀಶ್

ಕಲೆಗಾರ ತನ್ನ ಕಲಾಕೌಶಲ್ಯದಿಂದ ಸಮಾಜಕ್ಕೆ ಹೊಸ ದಿಕ್ಕನ್ನು ನಿರ್ಮಿಸಬಲ್ಲ. ಆದರೆ ಜಾತಿಯಿಂದ ಜಿಡ್ಡುಗಟ್ಟಿದ ಇಂಡಿಯಾ ದೇಶದಲ್ಲಿ ಕಲೆಗೆ ಪ್ರಾಮುಖ್ಯತೆ ಕೊಟ್ಟ ನಿದರ್ಶನಗಳು ಅಪರೂಪವೆನ್ನಬಹುದು. ಕಲೆ ಇಂಡಿಯಾ ದೇಶದಲ್ಲಿ ಜಾತೀಯತೆಯಿಂದ ಕೊಳಕಾಗಿ ಸಮಾಜಕ್ಕೆ ಅದರ ಉಪಯೋಗವಾಗದಂತೆ ಪಟ್ಟಭದ್ರಹಿತಾಸಕ್ತಿಗಳು ಅವುಗಳನ್ನು ಮೂಲೆಗುಂಪಾಗಿಸುತ್ತಿವೆ ಎನ್ನುವುದಕ್ಕೆ ಖ್ಯಾತ ಬೆರಳಚ್ಚು ಕಲೆಗಾರ ರಾಜು ಒಂದು ಉದಾಹರಣೆ.

ಮೈಸೂರಿನ ಮಾನಸಗಂಗೋತ್ರಿಯ ರಾಜ್ಯಶಾಸ್ತ್ರ ಇಲಾಖೆಯಲ್ಲಿ ವಿಗ್ರಹದಂತೆ ಕುಳಿತು ಬೆರಳಚ್ಚು ಯಂತ್ರದ ಮೇಲೆ ಎಡಬಿಡದೆ ಕೈಯಾಡಿಸಿಕೊಂಡು ಹೊಟ್ಟೆ ಹೊರೆಯುತ್ತಿರುವ ಕಲೆಗಾರ ರಾಜು ಕಡುಬಡತನದ ಕುಂಬಾರ ಕುಟುಂಬದಿಂದ ಮೂಡಿ ಬಂದವರು. ಸುಮಾರು 38 ವರ್ಷಗಳ ಗಡಿಮೀರುತ್ತಿರುವ ಈತ ಒಂದು ಕಾಲದಲ್ಲಿ ರಾಷ್ಟ್ರೀಯ ಖ್ಯಾತ ಫುಟ್‌ಬಾಲ್ ಕ್ರಿಡಾ ಪಟು. ಆಕಸ್ಮಿಕ ಅಪಘಾತದಿಂದ ದುರ್ಬಲಗೊಂಡ ರಾಜುವನ್ನು ಕ್ರೀಡಾರಂಗ ದೂರ ತಳ್ಳಿತು. ಪ್ರತಿಭೆಯ ಹುಚ್ಚು ಹಿಡಿದ ರಾಜು ಬೆರಳಚ್ಚು ಯಂತ್ರದ ಮೂಲಕ ಅಸಾಮಾನ್ಯವಾದ, ಅದ್ಭುತವಾದ ಚಿತ್ರಗಳನ್ನು ಬಿಡಿಸಿ ತಮ್ಮ ಹುಚ್ಚಿಗೆ ಮದ್ದು ಕಂಡುಕೊಂಡರು. ಬೆರಳಚ್ಚು ಯಂತ್ರದಿಂದ ಇಂತಹ ಚಿತ್ರಗಳನ್ನು ಬಿಡಿಸುತ್ತಾರೆಂದರೆ ಅದು ನಂಬಿಕೆಗೆ ನಿಲುಕದ ಮಾತು.


ನಾವು ಯಾಕೆ ಈ ಮಾತುಗಳನ್ನು ಹೇಳುತ್ತೇವೆಂದರೆ, ಚಿತ್ರಗಳನ್ನ ಕುಂಚಗಳ ಮೂಲಕ ಬಿಡಿಸಿ ತೋರಿಸಬಹುದಾದ ಸಾಧ್ಯತೆ ಇದೆಯೇ ಹೊರತು ಯಂತ್ರದ ಮೂಲಕ ಕೊಂಚವೂ ವಿಘ್ನವಾಗದಂತೆ ಚಿತ್ರ ಬಿಡಿಸಬಲ್ಲ ಕಲೆಗಾರರು ಇಂಡಿಯಾದಲ್ಲೇ ಏಕೆ ಪ್ರಪಂಚದಲ್ಲೇ ಬೆರಳೆಣಿಕೆಯಷ್ಟು ಜನ ಮಾತ್ರ. ಒಂದೊಂದು ಚಿತ್ರಕ್ಕೂ ಕಡಿಮೆ ಎಂದರೆ ಸುಮಾರು 120ಗಂಟೆಗಳು ಬೇಕಾಗುತ್ತವೆ. ಅಲ್ಲದೆ ಈ ರೀತಿಯ ಕಲೆಯನ್ನು ಬೋಧಿಸುವ ಯಾವುದೇ ಕಾಲೇಜುಗಳು ಪ್ರಪಂಚದಲ್ಲೇ ಇಲ್ಲವೆನ್ನಬಹುದು. ಅಂತಹದರ ನಡುವೆಯೂ ಸ್ವಸಿದ್ಧಿಯ ಮೂಲಕ ಬೆಳವಣಿಗೆಯಾದ ಈ ಕಲೆಗಾರ ಮೊದಮೊದಲು ನಕಾಶೆ, ಪ್ರಾಣಿಗಳು, ದೇವಸ್ಥಾನ, ಹೀಗೆ ಸುಮಾರು 10-15 ವರ್ಷಗಳ ಕಾಲ ಸತತ ಪ್ರಯತ್ನದಿಂದ ಈತ ಇಂದು ಎಂತಹ ಕಲೆಗಳನ್ನೂ ಈ "ಯಂತ್ರ"ದಿಂದ ಮೂಡಿಸಬಲ್ಲೆ ಎಂದು ಹೇಳುತ್ತಾರೆ.

ಈತನ ಕಲಾಪ್ರತಿಭೆಗಳು 1974ರಿಂದ 76ರ ಅಖಿಲ ಭಾರತ ಕಲಾಸ್ಪರ್ಧೆಯಲ್ಲಿ ಶ್ರೇಷ್ಠಸ್ಥಾನ ಪಡೆದುಕೊಂಡು ಕಲಾರಸಿಕರಿಂದ ಅಪಾರ ಮೆಚ್ಚುಗೆ ಪಡೆದವು. ಮಾಮೂಲಿಯಾದ ಕಲೆಯನ್ನು ನೋಡಿ ಬೇಸತ್ತಿದ್ದ ಕಲಾಪ್ರೇಮಿಗಳು ಈ ಹೊಸ ತಿರುವಿನ ಕಲೆಗಳನ್ನು ಸಹಜವಾಗೇ ಸ್ವೀಕರಿಸಿದರು. ಮೇಲ್ಜಾತಿ ಜನರ ಹಿಡಿತದಲ್ಲಿರುವ ಲಲಿತಕಲಾ ಅಕಡೆಮಿ ವಿಶ್ವವಿದ್ಯಾನಿಲಯಗಳಂಥ ಸಂಸ್ಥೆಗಳು, ಒಮ್ಮೆಲೇ ಈ ಕಲೆಗಾರನನ್ನು ಹತ್ತಿಕ್ಕುವ ಪ್ರಯತ್ನ ಮಾಡಿದುದು ಸ್ಪಷ್ಟವಾಗಿ ಕಂಡುಬರುತ್ತದೆ. 1976ರ ನಂತರ ಇವರ ಕಲೆಯನ್ನೇ ಪ್ರದರ್ಶಿಸಲು ಅವು ಇಷ್ಟ ಪಡಲಿಲ್ಲ. ಏಕೆ ? ಎಂದು ಕೇಳಿದಾಗ "ಈ ಕಲೆಗೆ ಸ್ಪರ್ಧೆಯೇ ಇಲ್ಲ", ಎಂಬ ಉತ್ತರವನ್ನಷ್ಟೇ ನೀಡಿದರು. ನಿಜವಾದ ಕಾರಣ "ಅದಲ್ಲ", ಎಂಬುದನ್ನು ಯಾರು ಬೇಕಾದರೂ ಊಹಿಸಿ ಹೇಳಬಹುದು. ವಿಶೇಷ ಕಲೆಗಾರನನ್ನು ಬೆಂಬಲಿಸಬೇಕು ಎಂಬ ತತ್ವ ವಿಶ್ವವಿದ್ಯಾನಿಲಯದಲ್ಲಿದ್ದರೂ ಈ ಕೆಳಜಾತಿಯ ಕಲೆಗಾರನನ್ನು ಗುರುತಿಸಲು ಅದು ಇಷ್ಟಪಡಲಿಲ್ಲ. ವಿಶ್ವವಿದ್ಯಾನಿಲಯದ ನೌಕರರ ಸಂಘ ಇಂತಹ ಒಬ್ಬ ಕಲೆಗಾರನನ್ನು ತನ್ನ ಗರ್ಭದೊಳಗಿಟ್ಟುಕೊಂಡಿದ್ದರೂ ಹೊರತಂದು ವಿಶ್ವವಿದ್ಯಾನಿಲಯಕ್ಕೆ ಒತ್ತಡ ತರುವ ಪ್ರಯತ್ನವನ್ನೇ ಅದು ಮಾಡದಿರುವುದು ಶೋಚನೀಯ ಸಂಗತಿಯಾಗಿದೆ.

'ಹಣ, ಸನ್ಮಾನಕ್ಕಾಗಿಯೇ ಕಲೆಯ ಹುಚ್ಚು ಹಿಡಿಸಿ ಕೊಂಡಿರಾ' ? ಎಂದು ನಮ್ಮ ಚುರುಕು ಬುದ್ಧಿಯ ಹರೀಶ ಕೇಳಿದ ಪ್ರಶ್ನೆಗೆ, ರಾಜು, "ಇಲ್ಲ ನೆಲದೊಡೆಯರಿಗೆ ನೆಲವಿಲ್ಲದಂತೆ ಬೆರಳಚ್ಚು ಕಲೆಗಾರನಾದ ನನಗೆ ಒಂದು ಸ್ವಂತ ಬೆರಳಚ್ಚು ಯಂತ್ರವನ್ನು ಇಟ್ಟುಕೊಳ್ಳುವ ಸ್ಥಿತಿ ಇಲ್ಲವಲ್ಲಾ ಅದಕ್ಕೆ" ಎಂದು ಹೇಳುತ್ತಾರೆ. ನಿಮ್ಮ ಕಲೆಯ ಗುರಿ ಏನು? ಎನ್ನುವ ಪ್ರಶ್ನೆಗೆ. "ಸಮಾಜದ ಬದಲಾವಣೆ ಮತ್ತು ಈ ಕಲೆಯ ಜ್ಞಾನ ಅಂತರರಾಷ್ಟ್ರೀಯ ಮಟ್ಟಕ್ಕೂ ವ್ಯಾಪಿಸುವಂತೆ ಬೆಳೆಸುವ ಪ್ರಯತ್ನ ಎಂದು ಉತ್ತರ ನೀಡಿದರು.

ರಾಜಕೀಯ ಪ್ರಭಾವ ಶ್ರೀಮಂತಿಕೆ ಪಡೆದುಕೊಂಡ ಕಲೆಗಾರರನ್ನು ಪ್ರೋತ್ಸಾಹಿಸುವ ನಮ್ಮ ಸರ್ಕಾರ ನನ್ನಂತಹ ಒಬ್ಬ ಬಡ ಕಲೆಗಾರನನ್ನೇಕೆ ಗುರುತಿಸುತ್ತಿಲ್ಲಾ? ಕಲೆ ಚೆನ್ನಾಗಿದೆ ಎಂದು ಹೇಳಿದ ಮಾತ್ರಕ್ಕೆ ಕಲೆಗಾರನಿಗೆ ಪ್ರೋತ್ಸಾಹ ದೊರೆತಂತಾಯಿತೇ ? "ಸರ್ಕಾರ ಹೋಗ್ಲಿ, ಕಲೆಗಾರರೇ ಕಲೆಗಾರರನ್ನು ಗುರುತಿಸುವ ಪ್ರಯತ್ನ ಮಾಡುತ್ತಿಲ್ಲ, ನೋಡಿ, ಡಾ|| ರಾಜಕುಮಾರರಿಗೆ ನಾನೊಂದು ಅವರ ಚಿತ್ರವನ್ನು ಬಿಡಿಸಿಕೊಟ್ಟೆ, ಚೆನ್ನಾಗಿದೆ ಎಂದು ಹೊಗಳಿದರು ವಿನಃ, ನನ್ನ ಸ್ಥಿತಿಯ ಬಗ್ಗೆ ಅವರೇನು ವಿಚಾರಿಸಲಿಲ್ಲ. ಅವರ "ಸಂಘವು" ನನ್ನತ್ತ

(ಮುಂದಿನ ಪುಟಕ್ಕೆ)



ರಾಜಕುಮಾರ್, ವಿಶ್ವೇಶ್ವರಯ್ಯ, ಮುಂತಾದ ಚಿತ್ರಗಳ ಬಿಡಿಸುತ್ತಾ ದಾರಿಕಾಣದಾಗಿರುವ ಕಲಾವಿಧ ರಾಜು.

ಸಕಲೇಶಪುರದ ಹೆಸರನ್ನು ನೀವೆಲ್ಲಾ ಕೇಳಿರಬಹುದು. ಕಳೆದ ವರ್ಷವಿಡೀ ಸುದ್ದಿಯಲ್ಲಿದ್ದ ಬಾಳ್ಳುಪೇಟೆ ಎಂಬ ಹಳ್ಳಿಯನ್ನು ತನ್ನ ಒಡಲಿನಲ್ಲಿ ಸೇರಿಸಿಕೊಂಡಿರುವ ತಾಲ್ಲೋಕಿನ ಹೆಸರೇ ಸಕಲೇಶಪುರ. ನೋಡಲು ಸುಂದರವಾಗಿ ಕಾಣುವ, ಕಾಫಿ ಮತ್ತು ಏಲಕ್ಕಿಯನ್ನು ಮೈಮೇಲೆ ಹೊದ್ದುಕೊಂಡಂತಿರುವ ಸಕಲೇಶಪುರ ಪಟ್ಟಣವು ಕೆಲವು ದಿನಗಳ ಹಿಂದೆ ಕಂಗಾಲಾಗಿತ್ತು. ಸಕಲೇಶಪುರದ ಮುಖ್ಯ ರಸ್ತೆಗಳು ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ಇದ್ದಕ್ಕಿದ್ದಂತೆಯೇ ಸ್ಮಶಾನದಂತಾಗಿದ್ದವು.

ಇದಕ್ಕೆ ಕಾರಣ ಕೋಮು–ಗಲಭೆ. ಇಬ್ಬರು ಪಡ್ಡೆ ಹುಡುಗರು ಸ್ವಾಭಾವಿಕವಾಗಿ ಹೊಡೆದಾಡಿ ತಮ್ಮ ಮನೆಗಳಿಗೆ ಹೋದರು. ಆದರೆ ಆಕಸ್ಮಿಕವಾಗಿ ಅವರಲ್ಲೊಬ್ಬ ಹಿಂದೂ ಕೋಮಿಗೂ ಇನ್ನೊಬ್ಬ ಮುಸ್ಲಿಂ ಕೋಮಿಗೂ ಸೇರಿದ್ದ. ಇದಿಷ್ಟೇ ಸಾಕಾಗಿತ್ತಲ್ಲ. ಭಾರತ ಪಾಕಿಸ್ತಾನದ ವಿಭಜನೆಗೆ ! ಇಲ್ಲಿ ಹೊಡೆದಾಡಿ ಮನೆಗೆ ಹೋದವರು ಮೂಲಭೂತವಾಗಿ ದೋಸ್ತ್‌ಗಳು. ಆದರೆ ಧರ್ಮದ ಅಮಲು ಹತ್ತಿದ್ದ ಕೆಲವು ಹಿಂದೂ ಮುಸ್ಲಿಂ ಮುಖಂಡರು ಇಂಥದೊಂದು ಅವಕಾಶಕ್ಕಾಗಿ ಕಾಯುತ್ತಿದ್ದರು.

ಮುಸ್ಲಿಮರಿಗೆ ಸೇರಿದ ಆಸ್ತಿಪಾಸ್ತಿಯನ್ನು ಹಿಂದೂ ಕೋಮಿಗೆ ಸೇರಿದ ಒಂದಷ್ಟು ಜನ ಚಿಂದಿ ಮಾಡತೊಡಗಿದರು. ಆರ್. ಎಸ್. ಎಸ್.ನ ಕೆಲವು ಕಾರ್ಯಕರ್ತರು ಶೆಟ್ಟರು ಮಾರ್ವಾಡಿಗಳಿಂದ ಹಣ ಜಮಾವಣೆ ಮಾಡುತ್ತಾ ಇನ್ನೊಂದು ಕಡೆ ಸೈಕಲ್ ಚೈನು, ಬ್ಲೇಡು, ದೊಣ್ಣೆಗಳನ್ನು ಒಟ್ಟು ಮಾಡುತ್ತ ನಡೆದರು. ಕೊಬ್ಬಿದ ಕೆಲವು ಮುಸ್ಲಿಮರು ರಿಕ್ಷಾವಾಲಾಗಳೂ ಮತ್ತು ಸೈಕಲ್ ರಿಪೇರಿ ಮಾಡುವವರನ್ನು ಒಂದುಗೂಡಿಸುತ್ತಾ ಒದೆ ಬಿಡುತ್ತಾ ನಡೆದರು. ಹೀಗೆ ಪರಸ್ಪರ ಒಂದಷ್ಟು ಜನರಿಗೆ ಹೊಡೆಯುತ್ತಾ ಕೈಗೆ ಸಿಕ್ಕಿದ್ದನ್ನು ನಾಶಮಾಡುತ್ತಾ ಎರಡು ಗುಂಪುಗಳು ಆವೇಶದಿಂದ ಮುನ್ನುಗ್ಗುತ್ತಿದ್ದಾಗ ಪೋಲೀಸ್ ಠಾಣೆಗೆ ಫೋನುಗಳ ಮೇಲೆ ಫೋನು ಬರತೊಡಗಿದವು. ಪ್ರತಿಯೊಬ್ಬ ರಾಜಕೀಯ ಪುಢಾರಿಯೂ ಫೋನ್ ಮಾಡುವವನೇ. "ಅವ್ನನ್ನ ಅರೆಸ್ಟ್ ಮಾಡ್ಬೇಡ್ರಿ, ಇವನ್ನ ಅರೆಸ್ಟ್ ಮಾಡ್ರಿ" ಇತ್ಯಾದಿ. ಅಷ್ಟರಲ್ಲಾಗಲೇ 8–10 ಜನ ಆಸ್ಪತ್ರೆಗೆ ದಾಖಲಾಗಿದ್ದರು. ಪೋಲೀಸರು ಯಾರನ್ನು ಅರೆಸ್ಟ್ ಮಾಡಬೇಕೋ ಅವರನ್ನು ಅರೆಸ್ಟ್ ಮಾಡದೇ ಹಾದಿಬೀದಿಯಲ್ಲಿ ಹೋಗುತ್ತಿದ್ದವರನ್ನು, ಅಬ್ಬೇಪಾರಿಗಳನ್ನು ಒದ್ದು ಅರೆಸ್ಟ್ ಮಾಡತೊಡಗಿದರು.

ಕೋಮುಗಲಭೆಗೆ ಕಾದ ರಣಹದ್ದು

ಮೊನ್ನೆ ನಡೆದ ಕೋಮುಗಲಭೆಯ ಬಗ್ಗೆ ಬರೆಯುವಾಗ 12–13 ವರ್ಷಗಳ ಹಿಂದೆ ಸಕಲೇಶಪುರದಲ್ಲಿ ನಡೆದ ಕೋಮು ಗಲಭೆ ನನ್ನ ನೆನಪಿಗೆ ಬರುತ್ತದೆ. ಆ ಗಲಭೆ ಇಷ್ಟೊಂದು ತೀವ್ರವಾಗಿರಲಿಲ್ಲ. ಅವತ್ತಿನ ಸಕಲೇಶಪುರಕ್ಕೂ ಇವತ್ತಿನ ಸಕಲೇಶಪುರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅವತ್ತು ಕಾಣಿಸಿಕೊಳ್ಳದಿದ್ದ ಟಿಂಬರ್ ಕಳ್ಳ ವ್ಯಾಪಾರಿಗಳು, ಗಂಧದ ಕಳ್ಳರು, ಅತ್ಯಾಚಾರಿಗಳು ಇಡೀ ಊರನ್ನೇ ನಿಮಿಷಾರ್ಧದಲ್ಲಿ ನುಂಗಬಲ್ಲ ಚಾಕಚಕ್ಯತೆ ಇರುವ ಭ್ರಷ್ಟ ಅಧಿಕಾರಿಗಳು ಇವತ್ತು ಒಂದೊಂದೇ ಹೆಜ್ಜೆಗೂ ಕಾಣಸಿಗುತ್ತಾರೆ. ಹಿಂದೆ ಗಲಭೆ ನಡೆದ ಒಂದು ರಾತ್ರಿ ಸುಮಾರು 8 ಗಂಟೆಯ ಸಮಯದಲ್ಲಿ ನನ್ನ ಮನೆಗೆ ಬರುತ್ತಿದ್ದಾಗ ಮಿಡ್ಲ್ ಸ್ಕೂಲ್ ಆವರಣದಲ್ಲಿ ಒಂದಷ್ಟು ಹಾಸ್ಟೆಲ್ ಹುಡುಗರು ಯಾವುದೋ ಬಿಲ್ಡಿಂಗ್ ಕಟ್ಟಲು ಪೇರಿಸಿ ಇಟ್ಟಿದ್ದ ಬಂಬೂಗಳನ್ನು ಪಟಪಟನೆ ಎಳೆದುಕೊಂಡು "ತುರುಕ್ರಿಗೆ ಇರಿರ್ರೋ" ಎಂದು ಜೋರಾಗಿ ಗಲಾಟೆ ಮಾಡುತ್ತಾ ಓಡಿಹೋದರು. ನನ್ನ ಹಿಂದೆ ಕತ್ತಿ ಮತ್ತು ದೊಣ್ಣೆಗಳೇ ನಡೆದು ಬರುತ್ತಿವೆ ಎಂಬ ಭೀತಿಯಲ್ಲಿ ಉಸಿರು ಬಿಗಿ ಹಿಡಿದು

ಕೆ. ಎಸ್. ಕೇಶವ ಪ್ರಸಾದ್

ಕೊಂಡು ನಾನು ಮನೆ ಸೇರಿದ್ದೆ. ಆಗ ಜಾತಿ ಧರ್ಮಗಳ ಕ್ರೂರತೆ ಈಗಿನಷ್ಟು ಅರ್ಥವಾಗಿರಲ್ಲಿಲ್ಲ.

ಮೊನ್ನೆ ನಡೆದ ಗಲಭೆ ಆರ್. ಎಸ್. ಎಸ್. ಮತ್ತು ಮತಾಂಧ ಮುಸ್ಲಿಮರ ನಡುವೆ ನಡೆದ ಗಲಭೆಯಾಗಿತ್ತು ಎನ್ನುವುದಕ್ಕೆ ಒಂದು ಉದಾಹರಣೆ—ಹಿಂದೂಧರ್ಮದ ಕಂಟ್ರಾಕ್ಟ್ ತೆಗೆದುಕೊಂಡಂತೆ ಓಡಾಡುವ ಪಟಾಕಿ ಅಂಗಡಿಯ ಸತ್ಯನಾರಾಯಣಗುಪ್ತ ಎಂಬ ಚಡ್ಡಿ ವೀರನಿಗೆ ಗಲಭೆಯ ಪ್ರಥಮ ಹಂತದಲ್ಲೇ ಮುಸ್ಲಿಂ ಗುಂಪೊಂದು ಒದೆ ಬಿಟ್ಟಿತು. ಆರ್. ಎಸ್. ಎಸ್. ನವರ ಸಿಟ್ಟು ಮುಸ್ಲಿಂ ಮತಾಂಧ ಅಬ್ದುಲ್ ರಷೀದ್ ಎಂಬ ಮುನ್ಸಿಪಾಲ್ ಸದಸ್ಯನ ಮೇಲೆ ಇತ್ತು. ಈತ ಕೆಲವಾರು ತಿಂಗಳ ಹಿಂದೆ ಹಿಂದೂ ಹುಡುಗಿಯೊಬ್ಬಳನ್ನು ಬಲತ್ಕಾರ ಮಾಡಲು ಹೋಗಿದ್ದ ಎಂಬ ಅಪಾದನೆಗೊಳಗಾಗಿದ್ದ. ಪ್ರತಿದಿನ ಬೆಳಿಗ್ಗೆ 4 ಗಂಟೆಗೆ ಊರಿನ ರಸ್ತೆಗಳಲ್ಲಿ ದೇವರ ನಾಮ ಹಾಡುತ್ತಾ ತನ್ನ ಪಟಾಲಂಗಳಿಗೆ ಸೂರ್ಯನಮಸ್ಕಾರ ಮಾಡಿಸುತ್ತಿದ್ದ ಗೋಖಲೆ ಸುಬ್ಬರಾಮಯ್ಯ ಎಂಬೊಬ್ಬ ಮುದಂಕನ ಬಾಯಲ್ಲಿ ಗಲಭೆಯ ನಂತರ ಒಂದೇ ಒಂದು ದೇವರ ನಾಮ ಉಳಿಯಲಿಲ್ಲ. ಈತ ಮುಸ್ಲಿಮರ ಬಗ್ಗೆ ಅಶ್ಲೀಲ ಪದ ಬಳಸುತ್ತಾ ಹಿಂದೂ ಗೂಂಡಾಗಳ ಸಂಘಟನೆ ಮಾಡತೊಡಗಿದ.

ಬಹಳಷ್ಟು ಕಡೆಗಳಲ್ಲಿ ಜಾತಿಗಲಭೆ ಮತ್ತು ಕೋಮು ಗಲಭೆಗಳನ್ನು ನಾನು ನೋಡಿದ್ದೇನೆ. ಗಲಭೆಯ ನಂತರ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಊರ ಮುಖಂಡರು ಸೇರಿ ಶಾಂತಿ ಸಮಿತಿ ಎಂಬ ಬಹಿರಂಗ ನಾಟಕವೊಂದನ್ನು ಆಡುತ್ತಾರೆ. ಈಗಾಗಲೇ ಅನೇಕ ಕಡೆಗಳಲ್ಲಿ ರಚಿಸಲಾಗಿರುವ ಶಾಂತಿಸಮಿತಿಗಳನ್ನು ನೋಡಿದರೆ ಶಾಂತಿ ಸಮಿತಿ ರಚಿಸುವವರ ತಲೆಯಲ್ಲಿ ಸಗಣಿಯ ವಿನಾ ಬೇರೇನೂ ಇಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಯಾರು ಯಾರು ಜಾತಿಗಲಭೆ ಅಥವಾ ಕೋಮು ಗಲಭೆಯ ನೇತಾರರಾಗಿ ಮುಂಚೂಣಿಯಲ್ಲಿರುತ್ತಾರೋ ಆ ಕಳ್ಳಕಾಕರೇ ಶಾಂತಿಸಮಿತಿಯ ಸದಸ್ಯರು. ಸಕಲೇಶಪುರದಲ್ಲೂ ಹಾಗೆ ಆಯಿತು. ಬಳಿ ವೆಂಕಟೇಶ, ಪುದುವಾಳ್, ಡಿ. ಎಸ್. ಭಟ್‌ರಂತಹ ಕಳ್ಳಕಾಕರೂ ರಷೀದ್, ಹಫೀಜ್‌ರಂತಹ ತಲೆಹಿಡಕರೂ ಶಾಂತಿಸಮಿತಿ ಸದಸ್ಯರಾದರು. ಯಾರು ಸೈಕಲ್ ಚೈನ್, ಬ್ಲೇಡ್, ಬಾಟ್ಲಿಗಳಲ್ಲಿ ಪೆಟ್ರೋಲ್ ಸರಬರಾಜು ಮಾಡುತ್ತಿದ್ದರೋ ಅವರೆ ಸದಸ್ಯರುಗಳು ಅಂದಮೇಲೆ ಕೋಮು ಗಲಭೆಯ ಗತಿ ?

ಕಳೆದವರ್ಷ ಬಾಳುಪೇಟೆಯಲ್ಲಿ ಜಾತಿಗಲಭೆ ನಡೆದ ನಾಲ್ಕೈದು ಗಂಟೆಗಳಲ್ಲಿ ನಾನು ಸ್ಥಳಕ್ಕೆ ಹೋಗಿ ಕೆಲವಾರು ಪ್ಲಾಂಟರ್‌ಗಳನ್ನು ಮತ್ತು ಕೆಲವಾರು ಹರಿಜನರ ಕುಟುಂಬಗಳನ್ನು ಭೇಟಿ ಮಾಡಿದೆ. ಪ್ರತಿಯೊಬ್ಬರೂ ಗುಮಾನಿ ಮತ್ತು ಭಯದ ವಾತಾವರಣದಲ್ಲಿ ಉಸಿರಾಡುತ್ತಿದ್ದರು. ಆ ದಿನ ಸಂಜೆ ಶಾಂತಿ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಶಾಂತಿ ಸಮಿತಿ ರಚನೆಗೆ ಮುನ್ನವೇ ಊರಿನ ಎಲ್ಲ ಸವರ್ಣಿಯರೂ ಬಂದು ಶಿಸ್ತಾಗಿ ಕೂತಿದ್ದರು. ಇನ್ನೂ ಕೂಡಾ ಹರಿಜನ ಕೇರಿಗಳಿಂದ ಯಾವೊಬ್ಬ ದಲಿತನೂ ಬಂದಿರಲಿಲ್ಲ. ಆಗ ಶಿಸ್ತಾಗಿ ಕೂತಿದ್ದ ಸವರ್ಣಿಯರ ಗುಂಪಿನಲ್ಲಿ ಹಲವಾರು ಮುಸ್ಲಿಮರೂ ಗಂಭೀರವಾಗಿ ಕೂತಿದ್ದರು. ಅವರಲ್ಲಿ ಕೆಲವರು ಸಕಲೇಶಪುರದವರೂ ಇದ್ದರು.

ಅಕ್ಷರಸೇನೆ—ಅನಕ್ಷರತೆಯ ನಿರ್ಮೂಲನಕ್ಕೆ ನಾಂದಿ

ರಾಜ್ಯದಲ್ಲಿ 55 ಲಕ್ಷ ಮಕ್ಕಳು, 120 ಲಕ್ಷ ವಯಸ್ಕರು ಅನಕ್ಷರಸ್ಥರೆಂದು ಅಂದಾಜು. ಈ ಅಗಾಧ ಪ್ರಮಾಣದ ಅನಕ್ಷರತೆಯ ನಿರ್ಮೂಲನಕ್ಕೆ ಸರ್ಕಾರ ಕಂಕಣಬದ್ಧ. ಅದಕ್ಕಾಗಿಯೇ ಅಕ್ಷರಸೇನೆಯ ಸ್ಥಾಪನೆ. ಪೂರ್ವ ಪ್ರಾಥಮಿಕ ಶಿಕ್ಷಣ ಶಾಲೆಯ ಹೊರಗಿನ ಅನೌಪಚಾರಿಕ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಂದ ಅನಕ್ಷರತೆಯನ್ನು ತೊಲಗಿಸಲು ಪ್ರಾಮಾಣಿಕ ಯತ್ನ.

ಎಳೆಯ ವಯಸ್ಸಿನಲ್ಲಿಯೇ ಮಕ್ಕಳಿಗೆ ಶಾಲೆಯ ಕಡೆಗೆ ಗಮನ ಹರಿಸುವಂತೆ ಮಾಡಲು ಎಲ್ಲ ಕ್ರಮ. ವರ್ಷಕ್ಕೆ 2000ರಂತೆ ಪೂರ್ವ ಪ್ರಾಥಮಿಕ ಕೇಂದ್ರಗಳ ಆರಂಭ. ಈ ಕಾರ್ಯಕ್ರಮದನ್ವಯ ರಾಜ್ಯದ ಎಂಟು ಜಿಲ್ಲೆಗಳಲ್ಲಿ ಕೋಲಾರ, ಬೆಳಗಾವಿ, ವಿಜಾಪುರ, ಮೈಸೂರು, ಮಂಡ್ಯ, ಚಿತ್ರದುರ್ಗ, ರಾಯಚೂರು ಮತ್ತು ಕಲ್ಬುರ್ಗಿ ಈಗಾಗಲೇ 5600 ಶಾಲೆಗಳನ್ನು ಆರಂಭಿಸಲಾಗಿದೆ.

ಶಾಲೆ ಬಿಟ್ಟ ಹಾಗೂ ಶಾಲೆಗೆ ಸೇರದ ಮಕ್ಕಳು ಬಿಡುವಿನ ವೇಳೆಯಲ್ಲಿ ಶಿಕ್ಷಣ ಪಡೆಯಲು ಅನೌಪಚಾರಿಕ ಕೇಂದ್ರಗಳನ್ನು ತೆರೆಯಲಾಗುವುದು. ಈ ವರ್ಷ 1.12 ಲಕ್ಷ ಮಕ್ಕಳಿಗೆ ಈ ಅವಕಾಶ ಮುಂದೆ 5 ವರ್ಷಗಳಲ್ಲಿ 15 ಲಕ್ಷ ಮಕ್ಕಳಿಗೆ ಈ ಸೌಲಭ್ಯ ದೊರೆಯಲಿದೆ.

ರಾಜ್ಯದ ಪ್ರತಿ ಪಂಚಾಯಿತಿಯಲ್ಲೂ, ವಯಸ್ಕರ ಸಾಕ್ಷರತಾ ಕೇಂದ್ರಗಳನ್ನು ಆರಂಭಿಸಿ ಈ ವರ್ಷ 2.70 ಲಕ್ಷ ವಯಸ್ಕರಿಗೆ ಅಕ್ಷರಜ್ಞಾನ ನೀಡಲಾಗುವುದು.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ

ಶ್ರೀಮಂತರು ನಮ್ಮ ಬೆಂಬಲಕ್ಕಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ ಗತ್ತಿನಿಂದ ಕೂತಿದ್ದ ಬಡ ಸವರ್ಣೀಯರು ಮತ್ತು ಮುಸ್ಲಿಮರು ಹರಿಜನರನ್ನು ತಮ್ಮ ಶತ್ರುಗಳು ಎಂಬಂತೆ ಡಿಕ್ಲೇರ್ ಮಾಡಿಕೊಂಡಂತಿದ್ದರು.

ಕೇವಲ ಒಂದು ವರ್ಷದಲ್ಲಿ ಈ ಡಿಕ್ಲರೇಷನ್ ಬಹಳಷ್ಟು ಬದಲಾವಣೆ ಕಂಡಿದೆ. ತಮ್ಮ ಅಂಗಡಿ ಮುಗ್ಗಟ್ಟುಗಳಲ್ಲಿ ಹೋಟೆಲ್‌ಗಳಲ್ಲಿ ಹರಿಜನರಿಂದ ತೊಂದರೆಯಾಗುತ್ತಿದೆ ಎಂಬ ಕಾರಣಕ್ಕಾಗಿ ಪ್ಲಾಂಟರುಗಳಿಗೆ ಸಪೋರ್ಟ್ ಮಾಡಿದ್ದ ಮುಸ್ಲಿಮರು ಈಗ ದಿಕ್ಕಾಪಾಲಾಗಿ ಯೋಚಿಸುತ್ತಿದ್ದಾರೆ. ಯಾಕೆಂದರೆ ಬಾಳ್ಳುಪೇಟೆಯ ಗಲಭೆಯಲ್ಲಿ ಯಾವ ಪ್ಲಾಂಟರುಗಳು ಬಡ ಸವರ್ಣೀಯರ ಮುಸ್ಲೀಂರ ಪರ ವಕಾಲತ್ತು ನಡಿಸಿ ಹರಿಜನರನ್ನು ಮುಗಿಸಿಬಿಡಲು ಹಣ ಮತ್ತು ಜನಬಲ ಪ್ರದರ್ಶಿಸುತ್ತಾ ತಿರುಗುತ್ತಿದ್ದರೋ ಅವರು ಇವತ್ತು ಬದಲಾಗಿದ್ದಾರೆ. ಮೊನ್ನೆ ಸಕಲೇಶಪುರದಲ್ಲಿ ನಡೆದ ಕೋಮು ಗಲಭೆಯಲ್ಲಿ ಮುಸ್ಲಿಮರನ್ನು ಮಟ್ಟಹಾಕಲು ಹಣಬಲ ಪ್ರದರ್ಶಿಸಿದ ಆಪಾದನೆಗೆ ಕೆಲವು ಪ್ಲಾಂಟರುಗಳು ತುತ್ತಾಗಿದ್ದಾರೆ. ಇದೆಲ್ಲವನ್ನೂ ನಮ್ಮ ಜನಗಳಿಗೆ, ಸದಾ ಭಯ ಮತ್ತು ಅನುಮಾನದಲ್ಲೇ ಬದುಕಬೇಕಾದ ಮುಸ್ಲಿಂ ಗೆಳೆಯರಿಗೆ ಹೇಗೆ ಹೇಳಬೇಕೆಂದು ಗೊತ್ತಾಗುತ್ತಿಲ್ಲ.

ಮೊನ್ನೆ ರಚಿಸಲಾದ ಶಾಂತಿ ಸಮಿತಿಯಲ್ಲಿ ಧರ್ಮ–ಜಾತಿಗಳಿಂದ ಮುಕ್ತವಾದ ಸುಲಿಗೆ ಇಲ್ಲದ ಸಮಾಜ ಕಟ್ಟಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ರೈತ ಸಂಘದ ವಿಶ್ವನಾಥ್ ಮೋಹನ್‌ರಾಗಲಿ ದಲಿತ ಸಂಘರ್ಷ ಸಮಿತಿಯ ಗೆಳೆಯರಾಗಲಿ, ಕಮ್ಯುನಿಸ್ಟ್ ಪಕ್ಷದ ಸುಕುಮಾರ್, ಪಾಲ್‌ರಾಗಲಿ, ಇರಲಿಲ್ಲ. ಇವರುಗಳು ಅಧಿಕಾರಿಗಳ ಅಥವಾ ಶಾಸಕನ ಕಣ್ಣಿಗೆ ಬೀಳಲೇ ಇಲ್ಲ ಎಂದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ.

ಮೊನ್ನೆ ಮೈಸೂರಿನ ಗೆಸ್ಟ್‌ಹೌಸ್ ಒಂದರಲ್ಲಿ ಕೂತು "ಪ್ರಜಾವಾಣಿ" ಓದುತ್ತಾ ಇದ್ದೆ. ಕಾಫಿ ತಂದ ಸಪ್ಲೈಯರ್ ಮುಖಪುಟದ ಹೆಡ್ಡಿಂಗುಗಳನ್ನು ಮನಸ್ಸಲ್ಲೇ ಓದಿ ಉದ್ಗಾರ ತೆಗೆದ— "ನೋಡಿ ಸಾ, ಗಲಾಟೆ ಮಾಡ್‌ವ್ರೂ ಅವ್ರೇಯಾ ಬಂದು ಸಮಾಧಾನ ಮಾಡೋವ್ರೂ ಅವ್ರೇಯಾ"

ತೆಳ್ಳಗೆ ಬೆಳ್ಳಗಿದ್ದ 26 ವರ್ಷದ ಆ ಹುಡುಗ ಮುಂಬೈನಲ್ಲಿ ನಡೆದ ಗಲಭೆಯ ಬಗ್ಗೆ ಇಂದಿರಾ ಗಾಂಧಿಯ ಫೋಟೋ ಇತ್ಯಾದಿ ನೋಡಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದ. ಈತ ಸಕಲೇಶಪುರದ ತಲೆತಿರುಕ ಹಿಂದೂ ಮುಸ್ಲಿಂ ಮುಖಂಡರುಗಳಿಗೆ ಪಾಠ ಹೇಳಲು ತಕ್ಕ ಮನುಷ್ಯ—ಎಂದು ನಾನೆಂದುಕೊಂಡೆ.

ತ್ಯಾಗ ಪ್ರಾಮಾಣಿಕತೆಗಳನ್ನೂ ಮೀರಿ ಬೆಳೆಯಬೇಕಾದ ಸಂಘರ್ಷ ಸಮಿತಿ

ದಲಿತ ಸಂಘರ್ಷ ಸಮಿತಿಯು ಜನರ ಜೀವನಾಡಿಯಾಗಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಈ ಲೇಖನ ಬರೆಯಬೇಕೆನಿಸಿ ನಿಮ್ಮೊಟ್ಟಿಗೆ ಮಾತಾಡುತ್ತಿರುವೆ. ಮೊದಲನೆಯದಾಗಿ ಸದಸ್ಯರು ಮತ್ತು ಕಾರ್ಯಕರ್ತರು ಬೇರೆ ಬೇರೆಯೆಂದು, ಇಬ್ಬರ ಜವಾಬ್ದಾರಿಗಳು ಹಕ್ಕುಗಳು ಸಹ ಭಿನ್ನವೆಂದು ತಿಳಿಯಬೇಕು. ಕಾರ್ಯಕರ್ತರು ಸದಸ್ಯರಿಂದಲೇ ಬಂದವರೆಂದು ತಿಳಿಯಬೇಕು.

ಸಂಘಟನೆಯ ಮಾತನ್ನು ಅಂಬೇಡ್ಕರ್‌ರವರ ಮಾತಿನೊಂದಿಗೆ ಪ್ರಾರಂಭಿಸುವೆ. ಸಂಘಟನೆಗೆ ಜನಬಲ, ಬುದ್ಧಿಬಲ, ಹಣಬಲ ಬೇಕಾಗಿರುತ್ತೆ. ದಲಿತ ಸಂಘಟನೆಗಳು ಸೋಲಲು ಈ ಮೂರು ಬಲಗಳ ಕೊರತೆ, ಜೊತೆಗೆ ಸೈದ್ಧಾಂತಿಕ ಕಾರ್ಯಕ್ರಮ ಇಲ್ಲದಿರುವುದು. ದಸಂಸ ಸಂಘಟನೆಗೆ ಹಣಬಲ ಇಲ್ಲವೇ ಇಲ್ಲ. ಬುದ್ಧಿಬಲ ಜನಬಲ ಅರ್ಧ ಇದ್ದು ಕುಂಟುತ್ತಾ ನಡೆಯುತ್ತಿದೆ. ಯಾವುದೇ ಸ್ಪಷ್ಟ ಕಾರ್ಯಕ್ರಮ ಇಲ್ಲದ ಕಾರಣ ಪೂರ್ಣ ಪ್ರಮಾಣದಲ್ಲಿ ಬರಬೇಕಾದ ಕಾರ್ಯಕರ್ತರು ಬಂದಿಲ್ಲ. ಕಾರ್ಯಕರ್ತರಾದವರು, ದಾರಿ ಮತ್ತು ಆ ದಾರಿಯ ದೂರದ ಬಗ್ಗೆ ಯೋಚಿಸುತ್ತಾ ಕ್ರಾಂತಿ ಕಡೆ ಹೋಗುವುದನ್ನು ಕಲಿತಿಲ್ಲ.

ಈಗಾಗಲೇ ಕಾರ್ಯಕರ್ತರಾಗಿರುವವರನ್ನು ಒಳಗೊಂಡಂತೆ ಮುಂದೆ ಬರುವವರನ್ನು ಗಮನದಲ್ಲಿಟ್ಟುಕೊಂಡು ಯೋಚಿಸುತ್ತಿರುವೆ.

ದಸಂಸವು ಒಂದು ಜನ ರಾಜಕೀಯ ಸಂಸ್ಥೆ. ಇದು ಜನಪರವಾದ ರಾಜಕಾರಣಕ್ಕೆ ಹೋರಾಡಿ ಶೋಷಣಾಮುಕ್ತ ಸಮಾಜವನ್ನು ನಿರ್ಮಿಸುವುದು ಇದರ ಗುರಿ. ಇದು ಸಾಧ್ಯವಾಗುವುದು ಹೋರಾಟದ ಹಲವು ಘಟ್ಟಗಳನ್ನು ಮೀರಿ ಬಂದಾಗಲೇ. ಪಕ್ಷ ರಾಜಕಾರಣದಿಂದ ದೂರವಿದ್ದು, ಸಾಂಸ್ಕೃತಿಕ ಸಂಸ್ಥೆಯಾಗಿದ್ದುಕೊಂಡು ಜನರ ಅನುಭವಕ್ಕೆ ಪೂರ್ಣರೂಪ ಕೊಡುತ್ತಾ ರಾಜಕೀಯ ಆಯಾಮವನ್ನು ಒದಗಿಸುವುದರ ಮೂಲಕ ತಾನು ಮುನ್ನಡೆಯುತ್ತಿದೆ. ಇದನ್ನು ಕಾರ್ಯರೂಪಕ್ಕೆ ತರಲುಬೇಕಾಗುವ ಕಾರ್ಯಕರ್ತರು ಅವರ ಪಾತ್ರ ಬಹು ಮುಖ್ಯ.

ಗಂಗಾರಾಂಚಂಡಾಳ

ನನ್ನ ಮಟ್ಟಿಗಂತೂ ಹೋರಾಟದಿಂದಲೇ ಕಾರ್ಯಕರ್ತರು ರೂಪುಗೊಂಡರೆ ಬಹುಕಾಲ ಗಟ್ಟಿಯಾಗಿ ಉಳಿಯುತ್ತಾರೆ. ಆವೇಶದಿಂದ ಬಂದವರು ಆವೇಶ ಇಳಿದ ತಕ್ಷಣವೆ ದಸಂಸ ವಿರೋಧಿ ಕೆಲಸ ಮಾಡುತ್ತಿರುತ್ತಾರೆ.

ಹಾಲಿ ಇರುವ ಕಾರ್ಯಕರ್ತರನ್ನು ಎರಡು ವಿಧಗಳಿಂದ ಪರಿಗಣಿಸುವೆ. ಅಂದರೆ ಬಲ ಮತ್ತು ಎಡ ಕಾರ್ಯಕರ್ತರೆಂದು, ಅಂದರೆ ಬಲ ಕಾರ್ಯಕರ್ತರು ಕೆಲವೊಮ್ಮೆ ಕಾಂಗ್ರೆಸ್ ಜನತಾ ಪಕ್ಷಗಳಿಂದ ಕ್ರಾಂತಿಯಾಗುವುದೆಂದೂ ಇಲ್ಲಾ ಗಾಂಧಿಯ ವಿಶ್ವಸ್ಥ ವ್ಯವಸ್ಥೆಯಿಂದಲೊ ಇಲ್ಲಾ ಸಂಸದೀಯ ವ್ಯವಸ್ಥೆಯಿಂದಲೊ ಕ್ರಾಂತಿಯಾಗುವುದೆಂದಲೂ ತಿಳಿಯುವವರು. ಎಡ ಕಾರ್ಯಕರ್ತರೆಂದರೆ ಪ್ರಗತಿಪರರೆಂದೂ, ಕಮ್ಯುನಿಸ್ಟ್ ಸೋಷಲಿಸ್ಟ್ ಪಕ್ಷಗಳ ಕಡೆ ಬಲವಿರುವವರು ಸಾರ್ವತ್ರಿಕ ಅಭಿಪ್ರಾಯಕ್ಕೆ ಬೆಲೆಕೊಟ್ಟು ಕಾರ್ಯರೂಪಿಸುವರು.

ಆರು ವರ್ಷಗಳ ದೀರ್ಘ ಹೋರಾಟದಲ್ಲಿ ದ.ಸಂ.ಸ. ವ್ಯಾಪಕ ಕಾರ್ಯಕ್ರಮಗಳನ್ನು ತನ್ನಲ್ಲಿ ಕಂಡುಕೊಳ್ಳಬೇಕಿತ್ತು. ಆದರೆ ಕಾರ್ಯಕರ್ತರಲ್ಲಿ ಒಂದು ಮುಂದಾಲೋಚನೆಯ ಗುರುತು ಇಲ್ಲದ ಕಾರಣ ಸಮರ್ಥ ನಾಯಕತ್ವ ಹುಟ್ಟಿಲ್ಲ. ದಸಂಸದಲ್ಲೇ ಇರುವ ಅಂತವರಿಗೆ ಸರಿಯಾದ ಸ್ಥಾನ ಇಲ್ಲ. ಅಂತವರು ಮಾಡುವ ಕೆಲಸಗಳಿಗೆ ಸಹಕಾರ ಇತ್ಯಾದಿ ಇಲ್ಲ. ಈಗ ದಸಂಸ ಮುನ್ನಡೆಯುತ್ತಿರುವುದು ನಂಬಿಕೆ ಮೇಲೆ. ನಂಬಿಕೆ ಅಪನಂಬಿಕೆಯಾದಾಗ ಕಾರ್ಯಕರ್ತರು ನಿಷ್ಕ್ರಿಯರಾಗುತ್ತಾರೆ.

ದಸಂಸ ಕಾರ್ಯಕರ್ತರು ಒಟ್ಟಾಗಿ ಒಂದು ತತ್ವಕ್ಕೆ ಬದ್ಧರಲ್ಲದ ಜನರಾಗುತ್ತಿದ್ದಾರೆ. ಈ ದಿನ ದಸಂಸ ಉಳಿದಿರುವುದು ಕಾರ್ಯಕರ್ತರ ತ್ಯಾಗ ಪ್ರಾಮಾಣಿಕತೆಗಳಿಂದ. ದಸಂಸ ಚಲಿಸುವ ನೀರಾಗಬೇಕು. ಆದರೆ ಅದಾಗಿಲ್ಲ. ದಸಂಸದಲ್ಲೆ ಇರುವ ಅಸಮಾನತೆಯ ಕುಳಗಳನ್ನು ಒಳಗೇ ತಾತ್ವಿಕ ಹೋರಾಟದಲ್ಲಿ ಇಲ್ಲವಾಗಿಸಬೇಕು. ಪಟ್ಟಭದ್ರರು ತಮ್ಮ ಕೈಗೆ ತೆಗೆದುಕೊಳ್ಳಲು ನೋಡಿದ ಸಂದರ್ಭಗಳು ಸಹ ಎಲ್ಲಾ ಕಡೆ ಹೆಚ್ಚಾಗಿವೆ. ಕಮ್ಯುನಿಸ್ಟ್ ಪಕ್ಷಗಳು ದಸಂಸವನ್ನು ನುಂಗಲು ಪ್ರಯತ್ನಿಸಿದಷ್ಟು ಅವೇ ದೂರ ಹೋಗಿವೆ.

ಕಾರ್ಯಕರ್ತರಲ್ಲಿ ಒಂದು ತರದ ನಿರ್ಲಕ್ಷತನ ಮನೆಮಾಡಿದೆ. ಉದಾ ಸಾರ್ವಜನಿಕ ಅಭಿಪ್ರಾಯದ ಬಗ್ಗೆ, ಮೇಲಿನ ಸಮಿತಿಯ ಆದೇಶದ ಬಗ್ಗೆ ನಿರ್ಲಕ್ಷ. ತನ್ನಲ್ಲೆ ತಾನೊಬ್ಬ ದೊಡ್ಡ ನಾಯಕನೆಂಬಂತೆ ಬೀಗುವುದು ಜನರ ಬಗ್ಗೆ ಬೇಸರ ನಿರ್ಲಕ್ಷ್ಯದಿಂದಿರುವುದು ಇತ್ಯಾದಿಗಳೆಲ್ಲವೂ ನಾಳೆ ದಸಂಸವನ್ನು ಸಾಯಿಸಲಿವೆ.

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ವ್ಯಾಪಕ ಕಾರ್ಯಕ್ರಮ

ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆ, ಗುಡಿ ಕೈಗಾರಿಕೆ, ಕೈಮಗ್ಗ ಮತ್ತು ಕರಕುಶಲ ಕೈಗಾರಿಕೋದ್ಯಮಗಳ ಅಭಿವೃದ್ಧಿಗಾಗಿ ಹೊಸ ಉತ್ತೇಜಕ ವಾತಾವರಣ ಕಲ್ಪಿತವಾಗಿದೆ.

1984-85ನೇ ಸಾಲಿಗಾಗಿ ಸಣ್ಣ ಹಾಗೂ ಗೃಹ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸಲು ಅನೇಕ ಆಶಾದಾಯಕವಾದ ಹೊಸ ಯೋಜನೆಗಳನ್ನು ರೂಪಿಸಲಾಗಿದೆ.

ಈ ಯೋಜನೆಗಳು, ಆಸಕ್ತ ಕೈಗಾರಿಕೋದ್ಯಮಿಗಳಿಗೆ ಆರ್ಥಿಕ ಸಹಾಯ ಮತ್ತು ತಾಂತ್ರಿಕ ಜ್ಞಾನವನ್ನು ಸಹ ಒದಗಿಸುತ್ತವೆ.

ಈ ಯೋಜನೆಗಳು :—

1 1985ನೇ ಡಿಸೆಂಬರ್ ತಿಂಗಳ ವೇಳೆಗೆ 36 ಕೋಟಿ ರೂ. ವೆಚ್ಚದಲ್ಲಿ 1510 ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲಾಗುವುದು. ಕಳೆದ 20 ವರ್ಷಗಳಲ್ಲಿ 120 ಕೋಟಿ ರೂ. ವೆಚ್ಚದಲ್ಲಿ 2000 ಕೈಗಾರಿಕಾ ಷೆಡ್ಡುಗಳನ್ನು ಮಾತ್ರ ನಿರ್ಮಿಸಲಾಗಿತ್ತು.

2 ಔಷಧಿಗಳು, ಚರ್ಮ ಮತ್ತು ಕೈಗಾರಿಕಾ ಸಲಕರಣೆಗಳು ಮುಂತಾದುವುಗಳಿಗೆ ಸಕ್ರಿಯ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗುವುದು.

3 ಸಣ್ಣ ಕೈಗಾರಿಕೆಗಳ ಮಾರಾಟ ನಿಗಮದ ನಿರ್ಮಾಣ.

4 ಕೈಮಗ್ಗ ತಾಂತ್ರಿಕ ಸಂಸ್ಥೆಯ ಸ್ಥಾಪನೆ.

5 ರಾಜ್ಯದ ನಾರು ಅಭಿವೃದ್ಧಿ ನಿಗಮದ ಸ್ಥಾಪನೆ.

6 ಚರ್ಮ ತಾಂತ್ರಿಕ ಸಂಸ್ಥೆಯ ಸ್ಥಾಪನೆ.

7. ಪ್ರಾಥಮಿಕ ಸಹಕಾರಿ ಕೈಮಗ್ಗ ಸಂಘಗಳ ಎಲ್ಲ ನೇಕಾರ ಸದಸ್ಯರುಗಳಿಗೂ ಈಗ ಅನ್ವಯವಾಗುತ್ತಿರುವ ಉಳಿತಾಯ ಕಾಣಿಕೆ ನಿಧಿ ಯೋಜನೆಯನ್ನು (Contributory thrift fund scheme) ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ವಿಸ್ತರಿಸುವುದು.

8. ವಿದೇಶಗಳಲ್ಲಿ ವಾಸಿಸುತ್ತಿರುವ ಭಾರತೀಯರಿಗಾಗಿಯೇ ಪ್ರತ್ಯೇಕ ಕೈಗಾರಿಕಾ ವಲಯಗಳ ಅಭಿವೃದ್ಧಿ.

ಕರ್ನಾಟಕ ವಾರ್ತೆ

ಚಳ್ಳಗುರ್ಕಿ : ದಲಿತರ ಬಿಡುಗಡೆಯ ಮಾರ್ಗಸೂಚಿ

ದಿ. ಮೇ 24ರ ಕನ್ನಡ ಪ್ರಭದ ಜನವಾಡಿಯಲ್ಲಿ ಮಾನ್ಯ ಬಿ. ಕೃಷ್ಣಪ್ಪ ಅವರು "ಅಸ್ಪೃಶ್ಯತೆಯೊಟ್ಟಿಗೆ ಹಿಂದೂಧರ್ಮ ನಾಶವಾಗಬೇಕು. ಇಲ್ಲ ಶುದ್ಧವಾಗಬೇಕು. ಇದರ ಕೀಲಿಕೈ ಅಸ್ಪೃಶ್ಯರ ಕೈಯಲ್ಲಿದೆ" ಎಂಬ ಸೂಕ್ತವಾದ ಮತ್ತು ಅತ್ಯಂತ ರಿಲೆವೆಂಟ್ ಆದ ಮಾತನ್ನು ಅಂದಿದ್ದಾರೆ.

ಇಡೀ ಹಿಂದೂಧರ್ಮ ಜಾತಿಗಳ ಅಂತಸ್ತುಗಳ ಸರಣಿಯಾಗಿದೆ. ಅದರ ಎತ್ತರದ ತುದಿಯಲ್ಲಿ ಬ್ರಾಹ್ಮಣರು, ಅತ್ಯಂತ ಆದಿಯಲ್ಲಿ ಅಸ್ಪೃಶ್ಯರಿದ್ದಾರೆ. ಆದ್ದರಿಂದ ಮಧ್ಯಂತರದ ಜಾತಿಗಳು ಜಾತಿ-ವಿನಾಶಕ್ಕಾಗಿ ಹೋರಾಡಿದರೂ ಅದು ಅವರವರ ಜಾತಿಯ ತನಕ ಬಂದು ನಿಂತುಬಿಡುವ ಸಂಭವವೇ ಹೆಚ್ಚು. ಉದಾಹರಣೆಯೆಂದಿಟ್ಟುಕೊಳ್ಳುವುದಾದರೆ ಜಾತಿ ವಿನಾಶದ ನನ್ನ ಹೋರಾಟ ಬ್ರಾಹ್ಮಣರ ವಿರುದ್ಧಕ್ಕೆ ಸೀಮಿತಗೊಳ್ಳುವ ಹಂತದಲ್ಲೇ ಇರುತ್ತದೆ. ಅವರ ಯಜಮಾನಿಕೆಯ ನಿಷೇಧ, ಅವರ ವಿರುದ್ಧದ ಆಕ್ರೋಶವೆಲ್ಲ ನಮ್ಮ ಜಾತಿಯವರೆಗೇ ನಿಂತುಬಿಡುತ್ತದೆ. ಅವರಲ್ಲಿಯ ಹೊಕ್ಕು-ಬಳಕೆ, ರಕ್ತ ಸಂಬಂಧವನ್ನು ನಾನು ಬಯಸುತ್ತೇನೆ. ಆದರೆ ಅದೇ ನನಗಿಂತ ಕೆಳಜಾತಿ ಹಾಗೂ ಮುಖ್ಯವಾಗಿ ಅಸ್ಪೃಶ್ಯರ ಹೊಕ್ಕು-ಬಳಕೆ, ರಕ್ತಸಂಬಂಧಕ್ಕಾಗಿ, ಅವರ ಪರವಾದ ಹೋರಾಟಕ್ಕಾಗಿ ತಪತಹಿಸುವುದಿಲ್ಲ. ಆದರೆ ಒಬ್ಬ ಅಸ್ಪೃಶ್ಯ ಇಡೀ ಜಾತಿ ವ್ಯವಸ್ಥೆಯ ವಿರುದ್ಧವಾಗಿ ಹೋರಾಟಕ್ಕೆ ಅಣಿಯಾಗಬೇಕಾಗುತ್ತದೆ. ಅಂದರೆ ಬಂಡವಾಳಶಾಹಿಯ ನಾಶದಲ್ಲಿ ಕಾರ್ಮಿಕರೇ ಮುಂಚೂಣಿಯಲ್ಲಿ ನಿಲ್ಲುತ್ತಾರೆ, ಎಂದು ಮಾರ್ಕ್ಸ್–ಎಂಗೆಲ್ಸ್ ಹೇಳಿದ ಹಾಗೆ ಜಾತಿ ವಿನಾಶದ ಹೋರಾಟದಲ್ಲಿ ಅಸ್ಪೃಶ್ಯರೇ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಅಸ್ಪೃಶ್ಯರ ಹೋರಾಟ ಮಾತ್ರ ಜಾತಿ ವ್ಯವಸ್ಥೆಯನ್ನು ಇಡಿಯಾಗಿ ನಾಶಮಾಡಬಲ್ಲುದಾಗಿದೆ. ಅವರೊಟ್ಟಿಗೆ ಪ್ರಜ್ಞಾವಂತ ಸವರ್ಣೀಯರು ಹೆಗಲಿಗೆ ಹೆಗಲು ಕೊಟ್ಟು ಸಂಘರ್ಷವನ್ನು ತೀವ್ರಗೊಳಿಸಬೇಕು. ಅಂದಾಗ ಮಾತ್ರ ಜಾತಿವಿನಾಶ ಸಾಧ್ಯ. ಮತ್ತೆ ಇದು ಅನಿವಾರ್ಯ.

ರೋಗಚಿಕಿತ್ಸೆಗೆ ರೋಗ ಮೂಲವನ್ನು ತಿಳಿದಿರಬೇಕಾಗುತ್ತದೆ. ಹಾಗೆಯೇ ಈ ಜಾತಿ ಹಾಗೂ ಅಸ್ಪೃಶ್ಯತೆಯ ಮೂಲದ ಸ್ಪಷ್ಟ ಕಲ್ಪನೆಯು ನಮಗೆ ಅಗತ್ಯವಾಗಿದೆ. ಹಾಗಾದರೆ ಈ ಅಸ್ಪೃಶ್ಯತೆಯ ಮೂಲ ಎಲ್ಲಿಂದ? ಇದು ಗುಲಾಮಗಿರಿ ಹಾಗೂ ಊಳಿಗಮಾನ್ಯ ಪದ್ಧತಿಯ (ಕಾಲದ) ಅಂತೆಯೇ ಭಾರತದಲ್ಲಿ ಸಾಂದರ್ಭಿಕವಾಗಿ ಏರ್ಪಟ್ಟ ಆರ್ಯ–ದ್ರಾವಿಡ–ಬುಡಕಟ್ಟಿನ ಜನಾಂಗಗಳ ಘರ್ಷಣೆ ಹಾಗೂ ಅದರಲ್ಲಿ ಆರ್ಯರ ಕೈಮೇಲಾಗಿ ಉಳಿದವರ ಸಂಖ್ಯೆಯೂ ಗಣನೀಯವಾಗಿದ್ದುದರ ಒಂದು ಸಂಕೀರ್ಣ ಪರಿಣಾಮ.

ಇದರ ನಿವಾರಣೆ ಸುಲಭ ಸಾಧ್ಯವಲ್ಲ. ಇದಕ್ಕೆ ಮುಖ್ಯವಾದ ಅಡಚಣೆ ಎರಡು. ಒಂದು ಅಸ್ಪೃಶ್ಯರ ಬಡತನ. ಎರಡು, ತಲತಲಾಂತರದಿಂದ ಸವರ್ಣೀಯರಲ್ಲಿ ಹರಿದುಬಂದ ಧರ್ಮೋವೇದವಾದ ರೇಶ್ಮೆಯಂತ ಸಂಬುಗೆ.

ಇವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿದರೆ ಅರ್ಧದಷ್ಟು ಸುಧಾರಿಸುತ್ತದೆ. ಅಂದರೆ ವರ್ತಮಾನದ ಬಂಡವಾಳಶಾಹಿ ವ್ಯವಸ್ಥೆ ಅವರನ್ನ ತನ್ನ ವರ್ಗೀಯ ದೃಷ್ಟಿಯಿಂದ ನೋಡಿ, ತನ್ನ ವರ್ಗದ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಅಸ್ಪೃಶ್ಯತೆಯನ್ನು ದೂರ ಇಡುತ್ತದೆ. ಊಳಿಗಮಾನ್ಯ ಪದ್ಧತಿಯನ್ನು ನಾಶಮಾಡಲು ಹೇಗೆ ದರ್ಮವನ್ನು ಆಡಳಿತದ ಹೊರಗೆ ಇಡುವುದು ಅವಶ್ಯವಾಯಿತೊ ಹಾಗೆ ಆದರೆ ಇದರಿಂದ ರೋಗ ಗುಣವಾಗುವುದಿಲ್ಲ. ಯಾಕೆಂದರೆ ಧರ್ಮ–ಜಾತಿ ಬಂಡವಾಳಶಾಹಿಗೆ ಪೂರಕವಾಗಿ ಇರುತ್ತದೆ. ಆದ್ದರಿಂದ ಅದು ಧರ್ಮವನ್ನು ರಾಜಕೀಯದಿಂದ ದೂರ ಇಟ್ಟಂತೆನ್ನಿಸಿದರೂ (ಸೆಕ್ಯುಲರ್ ಸ್ಟೇಟ್ ಎಂದು ಸಾರಿದ್ದರೂ) ಸಾಮಾಜಿಕ ಮೌಲ್ಯನಿರ್ಣಯಕ್ಕೆ, ಗೌರವಕ್ಕೆ ಅದನ್ನೇ ಮೂಲಮಾನವನ್ನಾಗಿ ಮಾಡಿಕೊಳ್ಳುತ್ತದೆ.

ಆದ್ದರಿಂದ ಕೀಳ್ಮೆಯನ್ನ ಅಳಿಸಲು ಉದ್ಯೋಗ ಬದಲಾವಣೆ ಆಗಬೇಕು. ಅದು ಸಂಪೂರ್ಣ ಯಾಂತ್ರೀಕರಣದಿಂದ ಮತ್ತು ವೈಜ್ಞಾನಿಕ ಶಿಕ್ಷಣ ಕೊಡುವುದರಿಂದ ಸಾಧ್ಯ. ಆದರೆ ಬಂಡವಾಳಶಾಹಿ ಭಾರತದಲ್ಲಿ ವೈಜ್ಞಾನಿಕ ಶಿಕ್ಷಣಕೊಡಲಾಗುವುದಿಲ್ಲ. ಯಾಕೆಂದರೆ ಧರ್ಮ ಅದಕ್ಕೆ ಪೋಷಕವಾಗೇ ಇದೆ. ಹೆಚ್ಚು ಹೆಚ್ಚು ಮೇಲುಜಾತಿಯವರೇ ಬಂಡವಾಳಶಾಹಿಗಳಾಗಿ, ಅವರೇ ಆಡಳಿತದಲ್ಲಿರುವುದೇ, ಕಾರಣ.

ಇದು ಸಾಧ್ಯವಾಗುವುದು ವೈಯಕ್ತಿಕ ಆಸ್ತಿಯ ನಾಶದಿಂದ. ಅಂದರೆ ಸಂಪೂರ್ಣ ಸಾಮಾಜೀಕರಣದಿಂದ. ಇದು ಇಂದಿನ ಅಂದರೆ ಪ್ರಜಾಪ್ರಭುತ್ವ ಅಥವಾ ಬಂಡವಾಳಶಾಹಿ ಪ್ರಾತಿನಿಧಿಕ ಸರಕಾರದಿಂದ ಸಾಧ್ಯವಾಗುವುದಿಲ್ಲ. ಅದು ಗಾಂಧಿ, ಲೋಹಿಯಾ, ಮಾರ್ಕ್ಸ್-ಎಂಗೆಲ್ಸ್ ವಾದದ ಸರಣಿಯಲ್ಲಿ ಹಾದುಹೋಗಬೇಕು.

ಆದ್ದರಿಂದ ಅಸ್ಪೃಶ್ಯರಿಗೆ ಸದ್ಯದಲ್ಲಿ ತಮ್ಮ ಸಾಮಾಜಿಕ ಅಂತಸ್ತನ್ನು ಹಾಗೂ ದಾಸ್ಯವನ್ನು ನಿವಾರಿಸಿಕೊಳ್ಳಲು ಇರುವ ಮಾರ್ಗವೆಂದರೆ ಸಾಮೂಹಿಕವಾದ ಮತಾಂತರ ಅಥವಾ ತೀವ್ರವಾದ ಸಂಘರ್ಷ. ಪಶುಗಳಿಗಿಂತ ಕೀಳಾಗಿ ತಮ್ಮನ್ನ ಕಾಣುವ ಈ ಹಿಂದೂಧರ್ಮವನ್ನು ತಿರಸ್ಕರಿಸಿ ಬೇರೆ ಧರ್ಮಕ್ಕೆ ಮತಾಂತರ ಹೊಂದುವುದು. ಅಸ್ಪೃಶ್ಯರಂತೆ ಅದಕ್ಕೆ ಹತ್ತಿರವಾದ ಕೆಳಜಾತಿಗಳು ಮತ್ತು ನನ್ನಂತವರು ಹಿಂದೂಧರ್ಮವನ್ನು ತ್ಯಜಿಸುವುದೇ ಸೂಕ್ತವಾದುದು.

ಆದರೂ ಇದು ಸಂಪೂರ್ಣವಾಗುವುದಿಲ್ಲ. ಯಾಕೆಂದರೆ ಇದು ಮೂಲಭೂತ ಬದಲಾವಣೆಯೇನೂ ಅಲ್ಲ. ಅಲ್ಲಿಯೂ ಬಂಡವಾಳಶಾಹಿ ತನ್ನ ಕ್ರೂರ ಚುಂಚನ್ನು ಚಾಚದೇ ಇರುವುದಿಲ್ಲ. ಅಲ್ಲಿಯ ವರ್ಗಸೃಷ್ಟಿ ಭಾರತದಲ್ಲಿ ವರ್ಗಕ್ಕೂ ಜಾತಿಗೂ ಬಿಡಲಾಗದ ಸಂಬಂಧ. ಆದ್ದರಿಂದ ನಿಜವಾದ ಹೋರಾಟ ಇರುವುದು ವೈಯಕ್ತಿಕ ಆಸ್ತಿಯ ನಾಶ ಮತ್ತು ಸಂಪೂರ್ಣ ಯಾಂತ್ರೀಕರಣದಲ್ಲಿ. ಅಂದರೆ ಸಮಾಜವಾದಿ ವ್ಯವಸ್ಥೆಯನ್ನು ತರುವುದರಲ್ಲಿ.

ಸಮಾಜವಾದಿ ವ್ಯವಸ್ಥೆಗಾಗಿ ಹೋರಾಟ ಎಂದರೆ ಅಸ್ಪೃಶ್ಯತೆಯ ಮತ್ತು ಹಿಂದೂಧರ್ಮದ ವಿರುದ್ಧ ಮಾತ್ರ ಆಗುವುದಿಲ್ಲ. ಅದು ಎಲ್ಲಾ ಧರ್ಮದ ವಿರುದ್ಧವೂ ಆಗುತ್ತದೆ. ಅಂದರೆ ಏಕ ಕಾಲದಲ್ಲಿ ಧರ್ಮ ಹಾಗೂ ಬಂಡವಾಳಶಾಹಿಯ ವಿರುದ್ಧ ಆಗುತ್ತದೆ. ಆಗ ಮಾತ್ರ ಬಿ. ಕೃಷ್ಣಪ್ಪ ಅವರು ಹೇಳುವಂತೆ ಸಮಾಜದಲ್ಲಿ ತಮ್ಮ ಜಾತಿಯ ಗಾಳ ಹಾಕಲು ಬರುವ ಮಠಾಧೀಶರು, ಮುಲ್ಲಾಗಳು, ಪಾದ್ರಿಗಳು ಜೈಲಿನಲ್ಲಿರುತ್ತಾರೆ. ಆಗ ಮಾತ್ರ ಮನುಷ್ಯ ಮನುಷ್ಯರ ನಡುವೆ ಜಾತಿ, ಧರ್ಮ, ಮತ್ತು ಲಿಂಗಭೇದವಿಲ್ಲದೆ ಮಾನವೀಯ ಸಂಬಂಧ ಸಾಧ್ಯವಾಗುತ್ತದೆ. ಆಗ ಹಿಂದೂಧರ್ಮದ ಸುಧಾರಣೆ ಮಾತ್ರವಲ್ಲ ಎಲ್ಲಾ ಧರ್ಮದ ಸುಧಾರಣೆಯೂ (ನಾಶ) ಆಗಿ ಮನುಷ್ಯಧರ್ಮ ಸ್ಥಾಪಿತವಾಗುತ್ತದೆ.

ಇದನ್ನು ನಮ್ಮ ದಲಿತ ಬಂಧುಗಳು, ಯುವಕರು, ವಿದ್ಯಾರ್ಥಿಗಳು ಆಲೋಚಿಸಬೇಕು.

ಸದ್ಯ ಚಳ್ಳಕುರ್ಕಿಯಲ್ಲಿ ನಡೆಯುತ್ತಿರುವ ದ.ಸಂ.ಸ.ತಿಯ ಹೋರಾಟಕ್ಕೆ ನನ್ನ ಹಾರ್ದಿಕ ಬೆಂಬಲ ಉಂಟು.

ಆರ್. ವಿ. ಭಂಡಾರಿ

ಚಳ್ಳಗುರ್ಕಿ: ದಲಿತರೆದೆಯಲ್ಲಿ ಎದ್ದ ದಳ್ಳುರಿ

ದಲಿತರು ಕೆಡಿಸಿದ ದೇವರ ಜಾತಿ

"Untouchablity is a Crime against god and man"

ಇದು ಈ ದೇಶದ ಮಹಾತ್ಮ ಗಾಂಧಿಯವರ ಮಾತು, ಹಾಗೇ ಸರ್ಕಾರದ ಜಾಹಿರಾತು ಕೂಡಾ. ಈ ಮಾತನ್ನು ನೆನೆಸಿಕೊಳ್ಳಬೇಕಾದ ನಾಚಿಕೆಗೇಡಿನ ಸ್ಥಿತಿಯಲ್ಲಿ ಇವತ್ತಿಗೂ ನಾವಿದ್ದೇವೆ. ಇದಕ್ಕೆ ಇತ್ತೀಚಿನ ಜ್ವಲಂತ ಉದಾಹರಣೆ ಬಳ್ಳಾರಿ ಜಿಲ್ಲೆಯ "ಚಳ್ಳಗುರ್ಕಿ."

ಬಳ್ಳಾರಿಯು ನಮ್ಮ ಸಾರಿಗೆ ಮಂತ್ರಿ ಎಂ. ಪಿ. ಪ್ರಕಾಶರ ಜಿಲ್ಲೆ. ಇದೇ ತಾಲ್ಲೂಕಿನ "ಚಳ್ಳಗುರ್ಕಿ"ಯಲ್ಲಿ ಸುಮಾರು ನೂರೈವತ್ತು ದಲಿತ ಕುಟುಂಬಗಳಾಗಬಹುದು. ಎಲ್ಲಾ ಕಡೆಗಳಲ್ಲಿರುವಂತೆ ಇಲ್ಲಿ ಕೂಡಾ ಅಸ್ಪೃಶ್ಯತೆ ಚಾಲ್ತಿಯಲ್ಲಿದೆ. ಮೇ ತಿಂಗಳು ಹನ್ನೆರಡನೆಯ ತಾರೀಖು ..ಈ ಊರಿನ ಅಸ್ಪೃಶ್ಯರು "ಎಱ್ರಿತಾತ ಮಠ"ವನ್ನು ಹೊಕ್ಕರು. ಮೇಲ್ಜಾತಿಯ ಜಾತಿವಾದಿಗಳು ಕೆಲವರು ತಡೆ ನೂಡಿದರು.

ಹಳೆಯ ತಲೆಮಾರಿನ ಹಲವಾರು ಮುದುಕರೂ ಸೇರಿದಂತೆ ನೂರಾರು ಜನರು ಮಠ ಪ್ರವೇಶದಲ್ಲಿ ಪಾಲ್ಗೊಂಡಿದ್ದರು. ದಲಿತರು ಮಠದ ಅಂಗಳಕ್ಕೆ ಹೋದಾಗ ಬಾಗಿಲಿಗೆ ಬೀಗ ಜಡಿದಿತ್ತು. ಪೋಲೀಸರು ದಲಿತರ ಜತೆಗಿದ್ದರು. ಆದರೆ ಅವರ ಪ್ರಯತ್ನವೂ ವಿಫಲವಾಗಿತ್ತು. ರಾತ್ರಿ ಹತ್ತು ಗಂಟೆಗೆ ಬಳ್ಳಾರಿಯ ಅಸಿಸ್ಟೆಂಟ್ ಕಮಿಷನರ್ ಸ್ಥಳಕ್ಕೆ ಬಂದರು.

ಸಾಹೇಬರು ಉರಿದೆದ್ದರು

ಅಧಿಕಾರಿ: "ಹಾಗಾದ್ರೆ ನೀವೀಗ ಬಿಡ್ತಲ್ಲೇನ್ರಿ ?"

ಜಾತಿವಾದಿಗಳು: "ನಾವು ಬಿಡಾಕ್ಕಾಗಲ್ಲ; ಟ್ರಸ್ಟಿಗಳನ್ನ ಕೇಳಬೇಕ್ರಿ ಸಾಹೇಬ್ರ"

ಅ: ನೋಡ್ರಿ ನಾನ್ ಬಂದೀನಿ. ನೀವು ಬಿಡ್ಲೇಬೇಕ್ರಿ. ನೀವು ಬಿಡಲಿಲ್ಲಂದ್ರ ಬೀಗ ಮುರ್ದು ಒಳಗಡೆ ಕರ್‍ಕೊಂಡೋಗ್ತೀನ್ರಿ. ನಾನು ಸರ್ಕಾರಿ ಅಧಿಕಾರಿ ಅದೀನ್ರಿ, ನಿಮ್ಮೆಲ್ರನ್ನ ಜೇಲಾಗ ದಬ್ತೀನ್ರಿ. ಕಾನೂನದ, ಅದರಂತೇನೆ ಎಲ್ಲೂ ನಡೀಬೇಕ್ರಿ. ತಪ್ಪಿದಿರಿ ಅಂದ್ರ ಏನಾಗ್ತದ ಅಂತ ನೋಡ್ರಿ. ಯಾವನ್ರಿ ಅವನು ಬೀಗ ಹಾಕಿರೋನು ?

ಸಾಹೇಬರು ಉರಿದೆದ್ದಾಗ ಮಠದ ಬಾಗಿಲು ತೆರೆಯಿತು. ಹರಿಜನರು ಎಱ್ರಿತಾತನ ಗೋರಿಯನ್ನು ಕಂಡರು. ಹೊರಗೆ ಬಂದಾಗ AC ಯವರ ಒಂದು ಬೂಟು ಮಾತ್ರ ಕಳುವಾಗಿತ್ತು. "I donate this also ಎಂದು ಉಳಿದ ಒಂಟಿ ಬೂಟನ್ನು ಅಲ್ಲೇ ಬಿಟ್ಟು AC ಜೀಪೇರಿದರು. ಕ್ರೂರ ಜಾತಿವಾದಿ ಮನಸ್ಸುಗಳಿಗೆ ಏಟು ಬಿತ್ತು. ಅವರು ಮಾರನೆ ದಿನದಿಂದಲೇ ಅಸ್ಪೃಶ್ಯರಿಗೆ ಬಹಿಷ್ಕಾರ ಸಾರಿದರು.

ಮುಚ್ಚಿದ ಅಂಗಡಿಗಳು

ಅಂಗಡಿಗಳಲ್ಲಿ ದಲಿತರಿಗೆ ಯಾವ ಪದಾರ್ಥವೂ ದೊರೆಯಲಿಲ್ಲ. ಹಿಟ್ಟಿನ ಗಿರಣಿಗಳು 'ಬಂದ್' ಆದವು. ಮತ್ತು ಮುಖ್ಯವಾಗಿ ದಲಿತರಿಗೆ ಕೂಲಿ ಕೆಲಸ ಕೊಡಲಿಲ್ಲ. ವಿಷಯ ತಿಳಿದ ಜಿಲ್ಲಾಧಿಕಾರಿ ಶ್ರೀಮತಿ ವೀಣಾಶ್ರೀರಾಮರಾವ್ ಚಳ್ಳಗುರ್ಕಿಗೆ ಧಾವಿಸಿದರು. ಮುಚ್ಚಲ್ಪಟ್ಟ ಅಂಗಡಿ ಮಾಲೀಕರುಗಳನ್ನ ಕರೆಸಿ "ನೀವು ತಪ್ಪನ್ನು ತಿದ್ದಿಕೊಳ್ಳದಿದ್ದರೆ ಕಾನೂನು ರೀತ್ಯಾ ಶಿಕ್ಷೆ ಅನುಭವಿಸಬೇಕಾಗುತ್ತದೆ" ಎಂದರು. ದಲಿತರಿಗೆ ತುರ್ತಾಗಿ ಕಾಮಗಾರಿ ಕೆಲಸಗಳನ್ನು ಒದಗಿಸಿದರು. ದ.ಸಂ.ಸ. ಜಿಲ್ಲಾ ಘಟಕವು ಬಳ್ಳಾರಿಯಿಂದ ಚಳ್ಳಗುರ್ಕಿಗೆ ಪದಾರ್ಥಗಳ ಸರಬರಾಜು ಮಾಡಿತು.

ವಿಶೇಷ ವರದಿ

ಮುಳ್ಳೂರು ನಾಗರಾಜ್

ಜಿಲ್ಲಾ ಪೋಲೀಸ್ ಅಧಿಕಾರಿ ಶ್ರೀ ಕುಮಾರರು ಕೂಡಲೇ ಪೋಲೀಸ್ ಕಾವಲು ಹಾಕಿದರು; ಮೂರು ವ್ಯಾನುಗಳು ಚಳ್ಳಗುರ್ಕಿಯಲ್ಲಿ ಠಿಕಾಣಿ ಹೂಡಿದವು. ಮೇಲ್ಜಾತಿಯ ಎಂಟು ಜನರ ಮೇಲೆ PCR ಕೇಸು ದಾಖಲಾಯಿತು.

ಉಳ್ಳವರ ದಾಸಾನುದಾಸ ನಾರಾಯಣದಾಸ್

ಇಷ್ಟೆಲ್ಲ ಅಲ್ಲೋಲ ಕಲ್ಲೋಲವಾದರೂ ಸ್ಥಳೀಯ ಶಾಸಕರ್‍ಯಾರು ಜನರ ಕಷ್ಟ ವಿಚಾರಿಸಲು ಬರಲಿಲ್ಲ. ಇದೇ ಜಿಲ್ಲೆಯವರಾದ ಸಾರಿಗೆ ಮಂತ್ರಿ ಪ್ರಕಾಶರು ಇತ್ತ ಕಡೆ ತಲೆ ಹಾಕಲಿಲ್ಲ. ಲೋಕಲ್ ಶಾಸಕ ಕಾಂಗ್ರೆ ನಾಗನಗೌಡರು ಕೇವಲ ಲಿಂಗಾಯಿತ ಜಾತಿಯ ಪ್ರತಿನಿಧಿಯಂತೆ ಮಾತ್ರ ವರ್ತಿಸಿದರು. ಈ ಪ್ರಕರಣಕ್ಕೆ ರಾಜಕೀಯ ಬಣ್ಣ ಕೊಡಲು ಅವರು ಪ್ರಯತ್ನಿಸಿದರು. ದಿನಾಂಕ 16–5–84 ರಂದು ಜನತಾ ಮುಖವಾಡ ತೊಟ್ಟಿರುವ ತನ್ನ ದಲಿತ ಚೇಲ ನಾರಾಯಣದಾಸ ಎಂಬ ಶಾಸಕರನ್ನು ಚಳ್ಳಗುರ್ಕಿಗೆ ಕಳಿಸಿದರು. ದಲಿತನಾದ ಈತನನ್ನು ದಲಿತರು ಸ್ವಾಗತಿಸಿದರು.

ತನ್ನ ಹನ್ನೊಂದು ವರ್ಷಗಳ ಶಾಸಕ ಜೀವನದಲ್ಲಿ ಚಳ್ಳಗುರ್ಕಿಗೆ ದಾರಿತಪ್ಪಿಯೂ ಬಂದಿರದ ನಾರಾಯಣದಾಸ್ ಮೇಲ್ಜಾತಿಯ ಎಂಟು ಜನರನ್ನು ಬಂಧಿಸಿದಾಗ ಅವರ ರಕ್ಷಣೆಗಾಗಿ ದಲಿತರನ್ನು ರಾಜಿಗೆ ತಯಾರು ಮಾಡಲು ನಯವಾದ ಮಾತಾಡುತ್ತಾ ಬಂದ್ದರು. ಅವರ ಜತೆ ಬಳ್ಳಾರಿ ಮುನಿಸಿಪಲ್ ಪ್ರೆಸಿಡೆಂಟ್ ಸುಬ್ರಮಣ್ಯಂ, ಮರಿ ಪುಢಾರಿ 'ಮಾರೆಪ್ಪ', ಅಂಬೇಡ್ಕರ್ ಯುವಕ ಸಂಘದ ಮುದಿ ಅಧ್ಯಕ್ಷ 'ನರಸಿಂಹಯ್ಯ' ಮತ್ತು ನಿವೃತ್ತ ಮುದುಕ 'ಬೇವಿನ ಮರದ' ಇದ್ದರು.

ನಾರಾಯಣದಾಸರ ಮಾತುಕತೆ ಸಾಗಿತ್ತು. ಮಾರೆಪ್ಪ ಸಕಾಲದಲ್ಲಿ ಹಿಮ್ಮೇಳ ಕೂಡಿಸುತ್ತಿದ್ದ. ನರಸಿಂಹಯ್ಯ ಗೊಮ್ಮಟೇಶ್ವರನಂಥ ಮುಗ್ಧ ಮುಖಭಾವದಲ್ಲಿ ಕುಂತಿದ್ದರು.

ದಾಸ್: "ನೋಡ್ರಪ್ಪ ಇವತ್ತು ಪೋಲೀಸ್ರು ಅದಾರ, ನಾಳೆ ಖಾಲಿ ಮಾಡ್ತಾರ. ಸರ್ಕಾರ ಅಂಬೋದು ಎಲ್ಲಿ ತನಕ ಕೂಲಿ ಕೊಡ್ತತಿ ? ನಿಮಗಂತು ದಿಕ್ಕಿಲ್ಲ. ಲಿಂಗಾಯ್ತರ ಹತ್ರಕ್ಕ ಹೋಗ್ಲೇಬೇಕಾಗ್ತತಿ. ಏನ್ ಮಾಡ್ತೀರಪ್ಪಾ ?"

ದಲಿತರು: ಹೌಂದ್ರಿ ಸಾಹೇಬ್ರ ಹೌಂದ್ರಿ.

ದಾಸ್: ನಾನು ರಾಜಿ ಮಾಡ್ಲಾಕ ಬಂದೀನಿ ಅಂತ ತಿಳಕೋ ಬ್ಯಾಡ್ರಿ. ನನಗಾದ್ರು ನನ್ನ ಜನರ ಹಿತ ಮುಖ್ಯ. ಅವರು ಕಷ್ಟ ಪಡೋದನ್ನ ನೋಡ್ಲಾಕ ನನ್ನ ಕೈಲಿ ಆಗುದಿಲ್ಲ.

ದಲಿತರು: ರಾಜಿ ಅಂಬೋದು ಹ್ಯಾಂಗ್ರಿ ಸಾಹೇಬ್ರ ಯಾಕ್ರಿ ಸಾಹೇಬ್ರ ?

ದಾಸ್: ಎಲ್ಲಾ ಮೊದಲು ಹ್ಯಾಂಗ ನಡೀತಿತ್ತೊ ಹಾಂಗ ನಡೀಬೇಕು.

ದಲಿತರು: ಅಂದ್ರ ನಾವು ಗುಡೀಕೋಗಂಗಿಲ್ಲ, ಹೋಟಲೊಳಗೆ ಚಾ ಕುಡಿಯಂಗಿಲ್ಲ ಹೊರಗಡಿ ಕುಂದರಬೇಕು.

ನಾರಾಯಣದಾಸ್ ಕಮಂಗಿಯಂತಾದರು. ಮುಖದಿಂದ ಬೆವರಿಳಿಯತೊಡಗಿತು. ಮಾತುಗಳು ಕೈಕೊಟ್ಟು ತೊದಲತೊಡಗಿದರು. ಆದರೂ ಸಾವರಿಸಿಕೊಂಡು ತಮ್ಮ ರಾಜಕೀಯ ಶೈಲಿಯಲ್ಲಿ ಮಾತನಾಡತೊಡಗಿದರು.

"ಯಾವ ಕುಲದವನಯ್ಯ ಎರ್ರಿತಾತ"

ಚಳ್ಳಗುರ್ಕಿಯ ಎರ್ರಿತಾತನ ಕುಲದವನೆಂದು ಯಾರಿಗೂ ಗೊತ್ತಿಲ್ಲ. ಕೆಲವರು ಅವನು ಹೊಲೆಯನೆಂತಲು ಮತ್ತೆ ಕೆಲವರು ಮಾದಿಗರವನೆಂತಲು ಹೇಳುತ್ತಾರೆ. ಆದರೂ ಅವನು ಲಿಂಗಾಯಿತರ ಸೊತ್ತಾದದ್ದು ಹೇಗೆಂಬುದು ನಿಗೂಢವಾಗಿ ಉಳಿದಿದೆ. ಎರ್ರಿತಾತ ನಮ್ಮ ಈ ಶತಮಾನದ ಮನುಷ್ಯ. ಅವನನ್ನು ಕಣ್ಣಾರೆ ಕಂಡ ಅನೇಕರು ಈಗಲು ಬದುಕಿದ್ದಾರೆ. ಆತ ಬಳ್ಳಾರಿ ಸೀಮೆಯಲ್ಲೆಲ್ಲೋ ತಾಸೀಲ್ದಾರನಾಗಿದ್ದು ಕೊನೆಗೆ ಸಂನ್ಯಾಸಿಯಾಗಿ "ಎರ್ರಿತಾತ" ಎನಿಸಿಕೊಂಡ. "ಎರ್ರಿ ಎಂಬುದು ತೆಲುಗು ಮೂಲದ ಪದ. ಅದರರ್ಥ ಹುಚ್ಚ" ಎಂದು.

ಬಳ್ಳಾರಿಯಿಂದ ನಲವತ್ತು ಕಿಲೋಮೀಟರು ದೂರದ ಚಳ್ಳಗುರ್ಕಿಯಲ್ಲಿ ನೆಲೆಸಿದ ಎರ್ರಿತಾತ ಪವಾಡಗಳ ಗೊಂಡಾರಣ್ಯ. ಅನೇಕ ದಂತಕತೆಗಳು ಈತನ ಸುತ್ತ ಹೆಣೆಯಲ್ಪಟ್ಟಿವೆ. ಹಸೀ ಸುಳ್ಳುಗಳ ಸಂತೆಯಲ್ಲಿಈಭಾಗದ ಲಿಂಗಾಯಿತರು ಈತನನ್ನು ಮಾರಾಟಕ್ಕಿಟ್ಟಿದ್ದಾರೆ. ಎರ್ರಣ್ಣ ಎರ್ರಯ್ಯ ಎರ್ರೆಪ್ಪ ಎಂಬ ಹೆಸರುಗಳು ಎಲ್ಲಾ ಜಾತಿಗೂ ಹಂಚಲ್ಪಟ್ಟಿವೆ. ಎರ್ರಿತಾತನ ಮಠ ಮತ್ತು ಅದರ ಆಸ್ತಿಗಳು ಲಿಂಗಾಯಿತರ ಕೈಲಿವೆ. ಕೆಲವು ಟ್ರಸ್ಟಿಗಳು ಮಠದ ಆಡಳಿತವನ್ನು ಹಿಡಿದುಕೊಂಡು, ಅದರ, ಆದಾಯದ ಮೇಲೆ ತಾವು ಜೀವನ ಸಾಗಿಸುತ್ತಿದ್ದಾರೆ. ಈ ಸುಲಿಗೆಕೋರರ ಹೀರೊ ಬಸವನಗೌಡನೆಂಬಾತ ಈತನು ಮುಖ್ಯ ಧರ್ಮದರ್ಶಿ. ಈತ ಬಳ್ಳಾರಿಯಲ್ಲಿ ತಳವೂರಿದ್ದಾನೆ.

ಮಠ ಪ್ರವೇಶದಂಥ ಸಮಾನತಾ ಆಂದೋಲನದ ನಾಯಕತ್ವ ವಹಿಸಿರುವ ದ.ಸಂ.ಸ. ನಿಲುವು ಹೀಗಿದೆ :

"ಎಲ್ಲರಂತೆ ನಾವು ಸಮಾನರು. ಗುಡಿಗೆ ಹೋಗಲು ನಮಗೆ ಹಕ್ಕಿದೆ. ಎಲ್ಲರಂತೆ ನಾವು ಸಾರ್ವಜನಿಕ ಬಾವಿ ನೀರು ಬಳಸಬೇಕು ಹೋಟಲಲ್ಲಿ ಎಲ್ಲರ ಜತೆ ಕೂತು ಚಾ ಕುಡೀಬೇಕು ತಿಂಡಿ ತಿನ್ನಬೇಕು. ನಾವು ಯಾರ ಮೇಲೂ ದೂರು ನೀಡಿಲ್ಲ. ನಡೆದ ಎಲ್ಲ ಘಟನೆಗೆ ಸಾಕ್ಷಿಯಾಗಿ *AC, DC, SP* ಇದ್ದಾರೆ. ಕಣ್ಣಾರೆ ಕಂಡದ್ದರಿಂದ ಪೋಲೀಸರೇನೆ ಕೇಸು ದಾಖಲು ಮಾಡಿದ್ದಾರೆ. ನಮ್ಮ ಜನ ಮುಗ್ಧರು. ಯಾರು ತಮ್ಮನ್ನು ಪ್ರೀತಿಯಿಂದ ಕಾಣುತ್ತಾರೋ ಅವರನ್ನು ಅವರಿಗಿಂತಲು ಹೆಚ್ಚಿನ ಪ್ರೀತಿಯಿಂದ ಕಾಣುತ್ತಾರೆ. ಅವರಾಗಿ ಕೂಲಿಗೆ ಕರೆದರೆ 'ನಮ್ಮ ಜನ' ಯಾವಾಗ ಬೇಕಾದರೂ ಕೆಲಸಕ್ಕೆ ಹೋಗಲು ಸಿದ್ಧರಿದ್ದಾರೆ. ಕೇಸನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಅಸ್ಪೃಶ್ಯತೆ ಘೋರವಾದ ಅಪರಾಧ. ತಪ್ಪಿತಸ್ಥರು ಶಿಕ್ಷೆಗೊಳಗಾಗಲೇಬೇಕು".

ಜಾತಿವಾದಿ ಖೂಳರ ಪರವಾಗಿ ಕುಮ್ಮಕ್ಕು ಕೊಡುತ್ತಿರುವವರು "ಕರ್ನಾಟಕ ಸ್ಟೇಟ್ ಬಾರ್ ಕೌನ್ಸಿಲ್"ನ ಪ್ರೆಸಿಡೆಂಟ್ ತಿಪ್ಪಣ್ಣ. ಇವರು ಬಳ್ಳಾರಿಯ ಪ್ರಖ್ಯಾತ ವಕೀಲರು. ನಾರಾಯಣದಾಸರನ್ನು ದಲಿತರ ಕೇರಿಗೆ ಕಳಿಸಿದ ನಂತರ ತಾವು ಲಿಂಗಾಯಿತರ ಕೇರಿಗೆ ಹೋಗಿ ಜಾತಿ ಮಸಲತ್ತಿನಲ್ಲಿ ಪಾಲ್ಗೊಂಡರು. ಜಾತಿ ರೋಗವು ಇವರ ರಕ್ತದಲ್ಲಿ ಬೆರೆತು ಹೋಗಿದೆ. ತತ್ವರಹಿತ ರಾಜಕಾರಣದಲ್ಲಿ ಪಳಗಿದ ಈ ಹಳೆ ಹುಲಿ ಕೂಡಾ ಚಳ್ಳಗುರ್ಕಿ ಅಸ್ಪೃಶ್ಯರ ಬಗ್ಗೆ ಕ್ರೋಧದಿಂದ ಉರಿಯುತ್ತಿದೆ.

ಎಲ್ಲ ಜಾತಿ ಕುಲಗಳನ್ನು ಮೀರಿ ನಿಂತ ಸಂತ 'ಎರ್ರಿತಾತ' ಕೂಡಾ ಜಾತಿ ವಾದಿಗಳ ಸೂತ್ರದ ಗೊಂಬೆಯಾಗಿರುವ ದುರಂತವ ಕಂಡು ಅವನ ಗೋರಿ ನಗುತ್ತಿಹುದು.

ದಾಸ್ : ಹಂಗಲ್ರಪ್ಪಾ ಮಠಕು ಹೋಗ್ರಿ ಹೋಟ್ಲಾಕು ಹೋಗ್ರಿ ಒಳಗಡೀನೆ ಚಾ ಕುಡೀರ್ರಿ ಯಾರು ಬ್ಯಾಡಂತಾರ್ರಿ ?

ದಲಿತರು : ಹಂಗಾರ ನಾವೇನು ಮಾಡೋಣಂತ್ರಿ ಸಾಹೇಬ್ರ ?

ದಾಸ್ : ಅವರ ಮೇಲೆ ಕೇಸು ಹಾಕೀದೀರಲ್ಲಪ್ಪ ಅದನ್ನು ವಾಪಸ್ ತಗೀಸ್ರಿ.

ದಲಿತರು : ಅದೆಂಗಾಗ್ತತ್ರಿ ಸಾಹೇಬ್ರ ? ಡಿ.ಸಿ. ಸಾಹೇಬ್ರು ಎಸ್.ಪಿ. ಸಾಹೇಬ್ರು ಅವರ ಮೇಲೆ ಕೇಸು ಹಾಕ್ಯಾರ. ನಾವ್ಯಾಂಗ ಆ ಕೇಸ್ನನ್ನ ವಾಪಸ್ ತಗಿಸಲಿಕ್ಕ ಬರ್ತತ್ರಿ ?

ದಾಸ್ : ಯಾವನ್ರಿ ಅಂವ ಡಿ. ಸಿ. ? ಯಾವನ್ರಿ ಅಂವ ಎಸ್.ಪಿ. ? ನಿಮಗೇನಾರು ತಲಿ ಅಯ್ತ ? ಅವರೆಲ್ಲ ನಾವಿಟ್ಟ ಗುಲಾಮರು. **DC, SP** ಎಲ್ಲಾ ನಮ್ಮ ಗುಲಾಮರು. ನಾವು ಪಗಾರ ಕೊಡ್ತೇವ್ರಿ ಆ ಮಗ ಕೆಲ್ಸ ಮಾಡ್ತಾನು. ನೀವು ಮಠ ಹೊಕ್ಕದಕ್ಕೆ ತಾನೆ ಅವನು ಕೇಸು ಮಾಡಿದ್ದು ?

ದಲಿತರು : ಹಂಗಾದ್ರ ನಾವು ಮಠ ಪ್ರವೇಶ ಮಾಡಬಾರದಿತ್ತೇನ್ರಿ ?-

ದಾಸ್ : ನಾನು ಹಾಗಂದ್ನಾ ? ಏನೋ ಆದದ್ದಾಯ್ತು ಕೇಸ್ ವಾಪಸ್ ತಗೀಸ್ರಿ ಅಂದೀನಿ. ಅದೂ ನಿಮ್ಮ ಒಳ್ಳೇದಕ್ಕಾಗೇ ಅಂದೀನಿ. ದಲಿತ ಸಂಘ ಅದೆ. ನಮ್ಮ ಬೆಂಬಲ ಮಾಡ್ತತಿಅಂತ ನೀವು ತಿಳಕೊಂಡಿದೀರಿ. ಆದ್ರ ಕಷ್ಟಕಾಲದಲ್ಲಿ ಯಾರೂ ಬರಲ್ಲ.

ದಲಿತರು : "ಯಾಕ್ರಿ ಸಾಹೇಬ್ರ ತಲಿ ಕೆಟ್ಟಂಗ ಆಡ್ತೀರಿ. ನೋಡ್ರಿ ಮತ್ತ ಇಲ್ಲಿ ಕುಂತಾರಲ್ಲ ಅವರೆಸ್ರು ಮುಳ್ಳೂರು ನಾಗರಾಜು ಅಂತ, ದಲಿತ ಸಂಘದೋರು ಮೈಸೂರಿನಿಂದ ಬಂದಾರ್ರಿ ನಮ್ಮ ಕಷ್ಟ ವಿಚಾರ್ಸಲಿಕ್ಕ"

ದಾಸ್ : ಇದೇ ನಿಮ್ಮ ಕೊನೆ ಮಾತೇನು?

ದಲಿತರು : ಹೌಂದ್ರಿ ಸಾಹೇಬ್ರ, ನಾವು ಕೇಸ್ ಹಾಕಿಲ್ರಿ, ನಾವು ಜಗಳ ಮಾಡಿಲ್ರಿ, ನಾವು ತಪ್ಪು ಮಾಡಿಲ್ರಿ. ರಾಜಿ ಗೀಜಿ ನಮಗ್ಗೊತ್ತಿಲ್ರಿ ದಲಿತ ಸಂಘ ಅದೆ. ಅದೆಂಗ ಹೇಳ್ತತೋ ಹಂಗ ನಡಿಯುವ್ರ ನಾವು. ಅದ್ರಾಗ ಬ್ಯಾರೆ ಮಾತಿಲ್ಲ.

ದಾಸ್ : ಈ ನನ್ಮಗನ ಜಾತ್ಕಿ ನಂಬಬಾರದ್ರಿ. ನಾನೂ ನಿಮ್ಮನ್ನೆಲ್ಲ ನಂಬಿ ಎಲ್ಲಕ್ಷನ್‌ದಾಗ ಒಂದೂವರೆ ಲಕ್ಷ ಕಳಕೊಂಡೀನಿ.

ನಾರಾಯಣದಾಸರು ಕುಂತ ಜಾಗದಿಂದ ಮೇಲೇಳುತ್ತಿರುವಾಗ ಗುಂಪಿನೊಳಗಿನಿಂದ ಒಂದು ಹುಡುಗ ಕೂಗಿದ : "ಆಹ್ಹಾ ಒಂದೂವರೆ ಲಕ್ಷ ಇವರಪ್ಪ ಬೆವರಸುರಿಸಿ ಕೂಡಿಸಿಟ್ಟಿದ್ದ ಮಹಾ ಕುಬೇರ ಇಂವ" ಜನ ನಗಲಾರಿಂಭಿಸಿದರು.

ದಾಸ್ : "ದಲಿತ ಸಂಘ ನಂಬ್ಕೊಂಡ್ರೆ ಹಾಳಾಗೋಗ್ತಿರೊ!" ಎಂದು ಉರಿಯುವ ಉದ್ರೇಕದಲ್ಲಿಪರಾರಿಯಾದರು. ಬಹಿಷ್ಕಾರ ಮುಂದುವರೆಯಿತು.

"ಮೌಲಿಕ ವಿಚಾರಗಳಲ್ಲಿ ರಾಜಿಯಿಲ್ಲ"

ಮೇ ಹದಿನೇಳರಂದು ಜಿಲ್ಲಾ ಪೋಲೀಸ್ ಅಧಿಕಾರಿ "ಶ್ರೀಕುಮಾರ"ರು ದ.ಸಂ.ಸ ಕಾರ್ಯಕರ್ತರ ಜತೆ ಸಮಸ್ಯೆ ಚರ್ಚಿಸಲು ಕರೆದರು. ಜಿಲ್ಲಾ ಸಂಚಾಲಕರಾದ ಈರಣ್ಣ, ಭೂಪತಿ, ಅಂಬಣ್ಣ, ಆನಂದ್ ಮತ್ತು ನಾನು ಹಾಜರಾದೆವು. ಹೊರಗೆ ಉರಿಯುವ ಕ್ರೂರ ಬಿಸಿಲು, ಒಳಗೆ ತಣ್ಣನೆ ಫ್ಯಾನು, ಅದರಡಿ ಕೂತ ಉಸ್ಸಿ ಮತ್ತು ಕುಷನ್ ಚೇರುಗಳು.

ಎಸ್ಪಿ : ಹೇಗಿದೆ ಚಳ್ಳಗುರ್ಕಿ ? ಜನ ದೇವಸ್ಥಾನಕ್ಕೆ ಹೋಗ್ತಾ ಇದ್ದಾರಾ ?

ದ. ಸಂ. ಸ : ನೆನ್ನೆ ನಾರಾಯಣದಾಸ್ ಬಂದಿದ್ರು ಸರ್

ಎಸ್ಪಿ : "ಏನಂತಾರೆ ಅವರು ? "

ದ. ಸಂ. ಸ : "ರಾಜಿ ಮಾಡ್ಕೊಳ್ಳಿ ಅಂದ್ರು ಸರ್"

ಎಸ್ಪಿ : ರಾಜಿ ! ಮೌಲಿಕ ವಿಚಾರಗಳಲ್ಲಿ ರಾಜಿ ಸಾಧ್ಯವಿಲ್ಲ. ಒಂದು ವೇಳೆ ನೀವು ಒಪ್ಪಿ ಕೊಂಡರು ನಾನು *Case withdraw* ಮಾಡ್ಕೊಳ್ಳಲ್ಲ.

ದ. ಸಂ. ಸ : ನಾವು ಒಪ್ಪಿಲ್ಲ ಸರ್. ಅವರು ನಿರಾಶೆಯಿಂದ ಹೊರಟುಹೋದ್ರು.

ಎಸ್ಪಿ : ನಾವು *Week for the weak* ಮಾಡೋಣ ಅಂತಿದ್ದೀವಿ. ಅಂದ್ರೆ "ದುರ್ಬಲರ ಸಪ್ತಾಹ" ಅಂತ. ನಿಮ್ಮ ಸಹಕಾರ ಬೇಕು. ಜಿಲ್ಲೆಯಲ್ಲಿ ಎಲ್ಲೆಲ್ಲಿ ಅಸ್ಪೃಶ್ಯತೆ ಇದೆಯೆಂಬುದರ ಬಗ್ಗೆ ನೀವು ಒಂದು ಲಿಸ್ಟ್ ತಯಾರಿಸಿ ಕೊಡಿ. ನಾವು ನಿಮ್ಮ ಜತೆ ಒಂದು ವಾರ ಸುತ್ತಿ, ಕಾನೂನು ಕ್ರಮ ತೆಗೆದುಕೊಳ್ತೀವಿ. ಇದು ಸರ್ಕಾರದ ಕಾರ್ಯಕ್ರಮ. ನೀವು ಸಕ್ರಿಯವಾಗಿ ಪಾಲ್ಗೊಳ್ಳಬೇಕು.

ದ. ಸಂ. ಸ : ಆಯ್ತು ಸರ್ ನಾವು ಈ ವಿಚಾರದಲ್ಲಿ ನಿಮ್ಮೊಡನೆ ಸಂಪೂರ್ಣ ಸಹಕರಿಸ್ತೀವಿ.

ನಾಗನಗೌಡರ ಗಡಿಬಿಡಿ

ನಾವು ಎಸ್ಪಿಯವರ ಚೇಂಬರಿನಿಂದ ಹೊರ ಬಂದಾಗ ಬಾಗಿಲಲ್ಲಿ ಲೋಕಲ್ ಶಾಸಕ ನಾಗನಗೌಡರು ನಿಂತಿದ್ದರು. ಅವರು ಎಸ್ಪಿಯವರೊಡನೆ ಮಾತನಾಡಿ ಬರುವುದಾಗಿ ಹೇಳಿದರು ; ಮತ್ತು "ನಿಮ್ಮೊಡನೆ ಕೊಂಚ ಮಾತನಾಡಬೇಕು ಇರಿ" ಎಂದರು. ಅವರು ಹೊರ ಬಂದಾಗ ಖಿನ್ನರಾಗಿದ್ದರು, ಯಾಕೆಂದರೆ ಎಸ್ಪಿಯವರು ಕೇಸ್ ವಾಪಸ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದರು. ಕೊನೆಗೆ ನಾಗನಗೌಡರು ತಗ್ಗಿದ ದನಿಯಲ್ಲಿ ಹೀಗೆಂದರು :

"*Unfortunatly Iam born as a a Lingayath,* ಕೇಸ್ ಪಾಡಿಗೆ ಕೇಸ್ ನಡೀಲಿ ನೀವೆಲ್ರು ಅಣ್ಣತಮ್ಮರ ಹಾಂಗಿರ್ರಪ್ಪ"

ದ. ಸಂ. ಸ : ಅಣ್ಣ ತಮ್ಮರ ನಡುವೆ ಬಹಿಷ್ಕಾರ ಅದಲ್ಲ ?

ಗೌಡರು : "ನಾನಿವತ್ತು ಸಂಜೆ ನಿಮ್ಮ ಊರಿಗೆ ಹೊಂಟೀನಿ ಬಹಿಷ್ಕಾರ ಕ್ಯಾನ್ಸಲ್ ಮಾಡಿಸ್ತೀನಿ"

ದ. ಸಂ. ಸ : ಆಯ್ತು ಸರ್ ನಮ್ದು ತಕರಾರೇನಿಲ್ಲ.

ಗೌಡರು : "ನಾನು ಜಾತಿಯಿಂದ ಲಿಂಗಾಯಿತ ನಾದ್ರು ರೂಲ್ಸು ನಿಮ್ಮ ಕಡೀಕದ, ನಾನೂ ನಿಮ್ಮ ಕಡೀಕದೀನಿ. ನೀವೇನೂ ತಿಳಕೋಬ್ಯಾಡ್ರಿ, ನಾನು ವರಿಜಿನಲ್ ಲಿಂಗಾಯ್ತ ಅಲ್ಲಪ್ಪ. ನಾವು ವೇಮನನ ವಂಶದವರು. ಬಸವಣ್ಣೋರ ಕಾಲದಲ್ಲಿ *Convertion* ಆದ್ವಿ ; ಬಸವಣ್ಣ ಧಾರ್ಮಿಕ ಗುರು ಅಲ್ಲ. ದೊಡ್ಡ ಸಮಾಜ ಸುಧಾರಕ. ಅವನ್ನ ಹಾಳು ಮಾಡ್ಯಾರ ನಮ್ಮ ಲಿಂಗಾಯ್ತ ಮಂದಿ. ಊರಿಗೆ ಬನ್ರಿ ಕೂತು ಮಾತಾಡ್ಣ" ಎಂದು ಕಾರಿನಲ್ಲಿ ಕೂತು ಕಾಣೆಯಾದರು.

ಕೃತಕ ಶಾಂತಿ ಸ್ಥಾಪನೆ

ಮೇ 19ರಂದು ಜಿಲ್ಲಾಧಿಕಾರಿಯವರ ಕಾರ್ಯಾಲಯದಲ್ಲಿ ಎಸ್ಪಿಯವರ ಸಮಕ್ಷಮದಲ್ಲಿ ಎರಡೂ ಕೋಮಿನ ಮುಖಂಡರು ಸೇರಿ ಪರಸ್ಪರ ಶಾಂತಿಯುತವಾಗಿ ವರ್ತಿಸುತ್ತೇವೆಂದು ಹೇಳಿಕೆ ನೀಡಿದರು. ಮೇಲ್ಜಾತಿಯವರು ಬಹಿಷ್ಕಾರ ರದ್ದು ಮಾಡಲು ಒಪ್ಪಿಕೊಂಡರು. ಮೇಲ್ನೋಟಕ್ಕೆ ಇಲ್ಲಿ ಶಾಂತಿ ಸ್ಥಾಪಿತವಾದಂತಿದೆ. ಆದರೆ ಮತ್ತೊಂದಾವರು ಇಲ್ಲಿ ಜಾತಿ ಜಗಳ ಸ್ಫೋಟವಾದರೆ ಬಳ್ಳಾರಿಯ ಮೂರನೆ ದರ್ಜೆಯ ರಾಜಕಾರಣಿಗಳೇ ಹೊಣೆಗಾರರಾಗುತ್ತಾರೆ.

ದಲಿತ ಸಂಘರ್ಷ ಸಮಿತಿ ಸರ್ಕಾರಕ್ಕೆ ಹೀಗೆ ಸಲಹೆ ಮಾಡಿದೆ. 'ಎರ್ರಿತಾತಾ' ಮಠವನ್ನು ಸರ್ಕಾರವೆ ವಹಿಸಿಕೊಂಡು ಎಲ್ಲರ ಪ್ರವೇಶಕ್ಕಾಗಿ ಅದನ್ನು ತೆರೆಯಬೇಕು. ಅಸ್ಪೃಶ್ಯತೆ ತೊಲಗಿಸಬೇಕು, ಊರಿಗೊಂದು ನ್ಯಾಯಬೆಲೆ ಅಂಗಡಿ ಬೇಕು, ಸರ್ಕಾರ ಏನು ಮಾಡುತ್ತದೋ ಕಾದುನೋಡಬೇಕು.

ಈ ಪ್ರಕರಣದಿಂದ ಸೋಲಿನ ಕಹಿಯುಂಡ ಜಾತಿವಾದಿಗಳು ಸುಮ್ಮನೆ ಕೂತಿಲ್ಲ. ಕರ್ತವ್ಯದ ದೃಷ್ಟಿಯಿಂದಲು ಮಾನವೀಯ ಕಾರಣದಿಂದಲು ಸತ್ಯದ ಪರವಹಿಸಿದ *AC, DC, SP* ಮುಂತಾದ ಸರ್ಕಾರಿ ಅಧಿಕಾರಿಗಳನ್ನ ಬೇರೆಡೆಗೆ ವರ್ಗ ಮಾಡಿಸುವ ಕ್ಷುಲ್ಲಕ ಪ್ರಯತ್ನಗಳನ್ನೂ ನಡೆಸಿದ್ದಾರೆ. ಪ್ರಾಮಾಣಿಕ ಅಧಿಕಾರಿಗಳ ವಿರುದ್ಧ ಜಾತಿವಾದಿಗಳನ್ನು ಛೂ ಬಿಡುತ್ತಿರುವ ರಾಜಕೀಯಸ್ಥರು ಮನುಷ್ಯತ್ವ ಇಲ್ಲದವರಾಗಿದ್ದಾರೆ.

**

ಆರ್. ಎಸ್. ಎಸ್. ಬಲೆಯಿಂದ ದಲಿತ ಸಂಘರ್ಷ ಸಮಿತಿಯೆಡೆಗೆ

(2ನೇ ಪುಟದಿಂದ)

ಪ್ರಶ್ನೆಯನ್ನು ಕೇಳಿ ಉತ್ತರವನ್ನು ಕಂಡುಕೊಳ್ಳದೆ ತಮ್ಮ ಪ್ರತಿಕ್ರಿಯೆಯನ್ನು ದಲಿತ ಸಂಘರ್ಷ ಸಮಿತಿಗೆ ಸೇರುವ ಮುಖಾಂತರ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿಗೆ ಸೇರಿದ ತಕ್ಷಣ ಈ ಸುಳಿವು ಸಿಕ್ಕ ಆರ್. ಎಸ್. ಎಸ್.ನ ಚಡ್ಡಿ ಚೇಲಾಗಳು ದಲಿತರನ್ನು ಹತ್ತು ಹಲವಾರು ಪ್ರಶ್ನೆಗಳಿಂದ ಅಲ್ಲೋಲ ಕಲ್ಲೋಲವಾಗಿಸಿದರು. ಇದರಿಂದ ತಳಮಳಗೊಂಡ ದಲಿತರು ಕೂಡಲೇ ಬೆಳ್ತಂಗಡಿ ತಾಲ್ಲೋಕಿನ ದ.ಸಂ.ಸ.ದ ಕಾರ್ಯ ನಿರ್ವಾಹಕರನ್ನು ಭೇಟಿಯಾಗಿ ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹೇಳಿಕೊಂಡರು. ಸಿಡಿಮಿಡಿಗೊಂಡ ಆರ್. ಎಸ್. ಎಸ್.ನ ಚೆಡ್ಡಿ ಚೇಲಾಗಳಿಗೆ ದಲಿತರಲ್ಲೂ ತಾವು ಸ್ವತಂತ್ರರಾಗಿ ಸಂಘಟನೆಯಾಗುತ್ತಿರುವುದು ನುಂಗಲಾರದ ತುತ್ತಾಗಿತ್ತು.

ಈ ಪರಿಸ್ಥಿತಿಯ ಪ್ರಖರತೆಯನ್ನು ಅರಿತುಕೊಂಡ ಬೆಳಂಗಡಿ ತಾಲ್ಲೂಕು ದ. ಸಂ. ಸ ದ ನಿರ್ವಾಹಕ ಪಿ. ಡೀಕಯ್ಯ ಇವರು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ದ. ಸಂ. ಸ.ದ ಆರ್. ಎಸ್. ದೊಡ್ಡಣ್ಣ ಸತ್ಯನಾರಾಯಣಶೆಟ್ಟಿ ಹಾಗೂ ಮಂಗಳೂರು ದ. ಸಂ. ಸ.ದ ರಾಮಕುಮಾರ, ಜೋಗೇಂದ್ರ, ಕಲ್ವೀರ್, ಕಾಂತಪ್ಪ ಅಲಂಗಾರ್ ಇವರನ್ನೊಳಗೊಂಡು ತಕ್ಷಣ ಒಂದು ಸಭೆಯನ್ನು ಬೆಳ್ತಂಗಡಿ ತಾಲ್ಲೂಕಿನ ಪಣಕಡೆ ಎಂಬಲ್ಲಿ ಕರೆದು ದಲಿತ ಸಂಘರ್ಷ ಸಮಿತಿಗೆ ಬಂದ ಎಲ್ಲಾ ದಲಿತರಿಗೆ ದ.ಸಂ.ಸ.ದ ಹುಟ್ಟು ಬೆಳವಣಿಗೆ ಮತ್ತು ಉದ್ದೇಶ ಸಾಧನೆ ಇತ್ಯಾದಿಗಳನ್ನು ವಿವರಿಸಿ ಅಂಜಿದ ಮನಸ್ಸಿಗೆ ಧೈರ್ಯವನ್ನು ತುಂಬುಕೊಟ್ಟರು ಮಾತ್ರವಲ್ಲ, ಪಣಕಡೆಯಲ್ಲಿ ಹೋಬಳಿ ಮಟ್ಟದ ಒಂದು ಶಾಖೆಯನ್ನು ತೆರೆಯಲಾಯಿತು. ಬೇಬಿ ಸುವರ್ಣ ಇವರು ಹೋಬಳಿ ನಿರ್ವಾಹಕರಾಗಿದ್ದು ಓಡಿಮೋಸ್ತಿ (ಮಾಲಾಡಿಗ್ರಾಮ) ಬೈರ (ಪಾರೆಂಕಿ ಗ್ರಾಮ) ಕಮ್ಮಯ್ಯ (ಕುವೆಟ್ಟು ಗ್ರಾಮ) ವಿಶ್ವನಾಥ (ಸೋಣಂದೂರು ಗ್ರಾಮ) ಇವರುಗಳು ಸಮಿತಿ ಸದಸ್ಯರಾಗಿರುವರು.

ಈಗ ಆರ್. ಎಸ್. ಎಸ್.ನ ಚಡ್ಡಿಗಳು ತಮ್ಮಲ್ಲಿಯೇ ಕೊರಗುತ್ತಿದ್ದಾರೆ. ಧರ್ಮ, ದೇವರ ಹೆಸರಲ್ಲಿ ಕೊಲೆ–ಸುಲಿಗೆ ಮಾಡುತ್ತಿದ್ದು ದಲಿತರನ್ನು ಧರ್ಮಾಂಧಕುರಿಗಳನ್ನಾಗಿಸಲೆತ್ನಿಸಿದ ವಿಶ್ವಹಿಂದೂ ಪರಿಷತ್‌ನ ಜಾತಿವಾದಿ ಸಂಘಟನೆಗೊಂದು ಕೊಡಲಿಯೇಟು ಇದು. ಹಸಿವು, ಬಡತನ, ಅಸ್ಪೃಶ್ಯತೆ ಸಾವು ನೋವು ಇತ್ಯಾದಿಗಳಿಂದ ಕಂಗೆಟ್ಟ ದಲಿತರು ಇನ್ನೆಷ್ಟು ಮಂದಿ ದಲಿತ ಸಂಘರ್ಷ ಸಮಿತಿ ಸೇರಲಿದ್ದಾರೆ.

—ಪಿ. ಡೀಕಯ್ಯ

ಸಂಪಾದಕ, ಪ್ರಕಾಶಕ, ಮುದ್ರಕ : ಗೋವಿಂದಯ್ಯ, ಮಹೇಶ್ವರ ಮುದ್ರಣಾಲಯ, ವಿಳಾಸ : 251–
ಗಂಗ[illegible]ಶೇಖರಸ್ವಾಮಿ
[illegible] 15 6ನೇ ಅಡ್ಡರಸ್ತೆ
ದಂತ[illegible]ನಂದನಗರ ಶ್ರೀರಾಂಪುರ
ಬೆಂಗಳೂರು 560 021